ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಂಬೈನಲ್ಲಿ ಗುರುವಾರ ಪಂಜಾಬ್ ಕಿಂಗ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಕ್ವಿಂಟನ್ ಡಿ-ಕಾಕ್ ಅವರ ಅಜೇಯ ಶತಕದ (112 ರನ್) ನೆರವಿನಿಂದ 195 ರನ್ ಗಳಿಸಿದೆ.

17 ಏಪ್ರಿಲ್ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 38 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸಿನಿ ಪಂಡಿತರ ಮಾತು » 2



ಯುದ್ಧದಿಂದ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ » 3



ಕುಡಿಯುವ ನೀರಿಗೆ ಸಮಸ್ಯೆ ಯಾದರೆ ಡಿಸಿಯೇ ಹೊಣೆ » 4

# ಮಹಿಳಾ ಮೀಸಲಾತಿಯಲ್ಲಿ ರಾಜಕೀಯ ಮಾಡದಿರಿ

## ವಿರೋಧಿಸುವವರು ದೀರ್ಘಕಾಲ ಬೆಲೆ ತೆರಬೇಕಾಗುತ್ತದೆ: ಪ್ರಧಾನಿ ಮೋದಿ ಎಚ್ಚರಿಕೆ

• ಪ್ರಜೋದಯ ವರದಿ

**ನವದೆಹಲಿ:** ಮಹಿಳಾ ಮೀಸಲಾತಿಯನ್ನು ವಿರೋಧಿಸುವವರನ್ನು ದೇಶಾದ್ಯಂತ ಮಹಿಳೆಯರು ಕ್ಷಮಿಸುವುದಿಲ್ಲ. ಅವರು ದೀರ್ಘ ಕಾಲದವರೆಗೆ ಬೆಲೆ ತೆರಬೇಕಾಗುತ್ತದೆ. ಮೀಸಲಾತಿ ಜಾರಿಗೊಳಿಸುವುದು ಭಾರತದ ಪ್ರಜಾಪ್ರಭುತ್ವದ ಪಯಣದಲ್ಲಿ ಐತಿಹಾಸಿಕ ಕ್ಷಣವಾಗಿದೆ. ಈ ವಿಷಯದಲ್ಲಿ ಯಾರು ರಾಜಕೀಯ ಮಾಡದಂತೆ ಪ್ರಧಾನಿ ನರೇಂದ್ರ ಮೋದಿ ಅವರು ಮನವಿ ಮಾಡಿದರು.

ಲೋಕಸಭೆಯಲ್ಲಿ ಗುರುವಾರ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮಾತನಾಡಿದ ಅವರು, 25-30 ವರ್ಷಗಳ ಹಿಂದೆಯೇ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕಾಗಿತ್ತು. ಅಗತ್ಯಗಳಿಗೆ ಅನುಗುಣವಾಗಿ ಕಾಲಾನಂತರದಲ್ಲಿ ಇದನ್ನು ಪರಿಷ್ಕರಿಸಲಾಗುವುದು. ಇದು ಪ್ರಜಾಪ್ರಭುತ್ವದ ಸೌಂದರ್ಯ. ನಮ್ಮದು ಪ್ರಜಾಪ್ರಭುತ್ವದ ತಾಯಿ. ಈ ಸದನದಲ್ಲಿರುವ ನಾವೆಲ್ಲರೂ ಅಭಿವೃದ್ಧಿ ಪ್ರಯಾಣಕ್ಕೆ ಹೊಸ



ಆಯಾಮವನ್ನು ಸೇರಿಸುವ ಶುಭ ಅವಕಾಶವಿದೆ ಎಂದರು.

ಭಾರತದ ಅಭಿವೃದ್ಧಿಯನ್ನು ಕೇವಲ ಮೂಲಸೌಕರ್ಯದಿಂದ ಅಳೆಯಲಾಗುವುದಿಲ್ಲ. ಅದು ನೀತಿ ನಿರೂಪಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನೂ ಪ್ರತಿಬಿಂಬಿಸ ಬೇಕು. ಅಭಿವೃದ್ಧಿ ಪಯಣದಲ್ಲಿ ಮಹಿಳೆಯರನ್ನು ನಿರ್ಣಯ ಕೈ ಗೊಳ್ಳುವುದರ ಭಾಗವಾಗಿಸುವ ಅವಕಾಶ ಸಂಸದರ ಬಳಿ ಇದೆ. ಆಡಳಿತದಲ್ಲಿ ಮಹಿಳೆಯರ ಒಳಗೊಳ್ಳುವಿಕೆ ಅಭಿವೃದ್ಧಿ ಹೊಂದಿದ ದೇಶ ನಿರ್ಮಾಣಕ್ಕೆ ಅತ್ಯವಶ್ಯಕವಾಗಿದೆ. ಕಾಯ್ದೆ ಮೂಲಕ ಮಹಿಳಾ ಮೀಸಲಾತಿ ಜಾರಿಯನ್ನು ರಾಷ್ಟ್ರೀಯ ಆದ್ಯತೆಯಾಗಿ ಪರಿಗಣಿಸಬೇಕೆ ಹೊರತು ಇಬ್ಭಾಗಿಸುವ ಅರ್ಥದಲ್ಲಲ್ಲ. ಮಹಿಳಾ ಮೀಸಲಾತಿ ಮಸೂದೆಯನ್ನು ರಾಜಕೀಕರಣ ಗೊಳಿಸುವ ಅಗತ್ಯವಿಲ್ಲವೆಂದರು.

ನಾನು ಅತ್ಯಂತ ಹಿಂದುಳಿದ ಸಮುದಾಯದಿಂದ ಬಂದಿದ್ದೇನೆ. ಆದರೆ, ಎಲ್ಲರನ್ನೂ ಜೊತೆಗೆ ಕರೆದೊಯ್ಯುವುದು ನನ್ನ ಜವಾಬ್ದಾರಿ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ನಾವು ಅವರ ಹಕ್ಕುಗಳನ್ನು ನೀಡುತ್ತಿದ್ದೇವೆ. ನಮಗೆ ಯಾವುದೇ ಕ್ರೆಡಿಟ್ ಬೇಕಾಗಿಲ್ಲ, ಬೇಕಾದರೆ ನೀವೆ ತಗೊಳ್ಳಿ. ಈ ವಿಚಾರದಲ್ಲಿ ರಾಜಕೀಯ ಮಾಡ ಬಾರದು. ಮಸೂದೆ ಬೆಂಬಲಿಸುವ ಮೂಲಕ ನಾವೆಲ್ಲರೂ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಬೇಕಾಗಿದೆ ಎಂದು ಪ್ರತಿಪಕ್ಷಗಳಿಗೆ ಪ್ರಧಾನಿ ಮನವಿ ಮಾಡಿದರು.

**ಒಂದು ಪಕ್ಷ ಬಿಟ್ಟು ಬೇರೆ ಯಾರು ವಿರೋಧಿಸಿಲ್ಲ**

ನಾವು ಈಗಾಗಲೇ ಅದನ್ನು ವಿಳಂಬ ಮಾಡಿದ್ದೇವೆ. ಕಾರಣಗಳು ಏನೇ ಇರಲಿ, ಯಾರೇ ಜವಾಬ್ದಾರರಾಗಿದ್ದರೂ, ನಾವು ಈ ವಾಸ್ತವವನ್ನು ಒಪ್ಪಿಕೊಳ್ಳಬೇಕು. ಈ ಪ್ರಕ್ರಿಯೆ ನಡೆಯುತ್ತಿರುವಾಗ, ಎಲ್ಲಾ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಾಗುತ್ತಿತ್ತು. ಒಂದು ಪಕ್ಷವನ್ನು ಹೊರತುಪಡಿಸಿ, ನಾವು ಭೇಟಿಯಾದ ಪ್ರತಿಯೊಬ್ಬರೂ ತಾತ್ವಿಕ ವಿರೋಧವನ್ನು ವ್ಯಕ್ತಪಡಿಸಲಿಲ್ಲ. ನಂತರ ಏನೇ ಆದರೂ ಅದು ರಾಜಕೀಯ ದಿಕ್ಕನ್ನು ತೆಗೆದುಕೊಳ್ಳುತ್ತಿದೆ ಎಂದರು.

### ತಾರತಮ್ಯವಿಲ್ಲದೆ ಕ್ಷೇತ್ರ ವಿಂಗಡಣೆ

ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಯು ಪೂರ್ವದಿಂದ ಪಶ್ಚಿಮದವರೆಗೆ, ಉತ್ತರದಿಂದ ದಕ್ಷಿಣದವರೆಗೆ ಯಾವುದೇ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲವೆಂದು ಗ್ಯಾರಂಟಿ ಕೊಡುತ್ತೇನೆಂದು ಪ್ರಧಾನಿ ಮೋದಿ ಲೋಕಸಭೆಯಲ್ಲಿ ಹೇಳಿದರು. ರಾಜಕೀಯ ಲಾಭಕ್ಕಾಗಿ ಕ್ಷೇತ್ರ ಪುನರ್ ವಿಂಗಡಣೆ ಮಾಡಲಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸಿ, ಉತ್ತರ ಅಥವಾ ದಕ್ಷಿಣವಾಗಲಿ, ಈ ಪ್ರಕ್ರಿಯೆಯಿಂದ ಯಾವುದೇ ತಾರತಮ್ಯ, ಅನ್ಯಾಯವಾಗುವುದಿಲ್ಲವೆಂದು ಭರವಸೆ ನೀಡಲು ಬಯಸುತ್ತೇನೆ ಎಂದರು.

### ಇಂದು ಸಂಜೆ ಮತದಾನ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಸೇರಿ ಮೂರು ಮಸೂದೆಗಳನ್ನು ಮಂಡಿಸಿದ್ದು, ಅವುಗಳ ಚರ್ಚೆಗೆ 15 ಗಂಟೆ ಸಮಯ ನಿಗದಿ ಮಾಡಿದೆ. ಶುಕ್ರವಾರ ಸಂಜೆ 4 ಗಂಟೆಗೆ ಮತದಾನ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ತಿಳಿಸಿದರು.

ಲೋಕಸಭೆಯಲ್ಲಿ ಮಾತನಾಡಿದ ಅವರು, ಪ್ರಮುಖ ಮಸೂದೆಗಳ ಕುರಿತು ಸದನವು 15 ಗಂಟೆಗಳ ಕಾಲ ಚರ್ಚೆ ಮಾಡಲು ಸಮಯ ನಿಗದಿ ಮಾಡಲಾಗಿದೆ. ಸದಸ್ಯರು ಹೆಚ್ಚಿನ ಸಮಯಕ್ಕೆ ಬೇಡಿಕೆ ಇಟ್ಟರೆ ಅದನ್ನು 18 ಗಂಟೆಗಳವರೆಗೆ ಸ್ಪೀಕರ್ ಅವರು ವಿಸ್ತರಿಸುವ ಸಾಧ್ಯತೆ ಇದೆ. ಮಧ್ಯರಾತ್ರಿಯವರೆಗೂ ಸಂಸತ್ ನಡೆಯಲಿದೆ. ನಾಳೆ ಸಂಜೆ 4 ಗಂಟೆಗೆ ಮಸೂದೆಗಳ ಅಂಗೀಕಾರಕ್ಕೆ ಮತದಾನ ನಡೆಯಲಿದೆ ಎಂದು ಹೇಳಿದರು.

# ಮಂತ್ರಾಲಯಕ್ಕೆ ತೆರಳುತ್ತಿದ್ದ 8 ಮಂದಿ ದಾರುಣ ಸಾವು

## ಗೂಡ್ಸ್ ವಾಹನಕ್ಕೆ ಟ್ಯಾಂಕರ್ ಡಿಕ್ಕಿ | ಒಂದೇ ಕುಟುಂಬದ 6 ಮಂದಿ ದುರಂತ ಅಂತ್ಯ

• ಪ್ರಜೋದಯ ವರದಿ

**ಹಾಸನ:** ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ದರ್ಶನಕ್ಕೆ ತೆರಳುತ್ತಿದ್ದ ವೇಳೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೇಲೂರು ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದ ಒಂದೇ ಕುಟುಂಬದ ಆರು ಮಂದಿ ಹಾಗು ಚಿಕ್ಕಮಗಳೂರು ಜಿಲ್ಲೆಯ ಇಬ್ಬರು ಸೇರಿ ಒಟ್ಟು 8 ಮಂದಿ ದಾರುಣವಾಗಿ ಸಾವನ್ನಪ್ಪಿರುವ ಘಟನೆ ಗುರುವಾರ ಬೆಳಗಿನ ಜಾವ ಮಂತ್ರಾಲಯ ಸಮೀಪದ ಚಿಲಕನಡೋಣ ಬಳಿ ನಡೆದಿದೆ.

ಬೇಲೂರು ತಾಲ್ಲೂಕಿನ ಯಶೋಧಮ್ಮ, (60), ಕುಮಾರ್ (50), ದೀಪಿಕಾ, ವೀಣಾ (42), ಸುನೀಲ್ (40), ಬಾಲಕಿ ಬೆಳ್ಳಿ(3) ಹಾಗು ಚಿಕ್ಕಮಗಳೂರು ಜಿಲ್ಲೆ ಉಡೆವಗ್ರಾಮದ ಪುಟ್ಟಮ್ಮ (55) ಮತ್ತು ಮೀನಾಕ್ಷಿ (50), ಸಾವನ್ನಪ್ಪಿದ ದುರ್ದೈವಿಗಳು. ದುರಂತರದಲ್ಲಿ 10 ಕ್ಕೂ ಮಂದಿ ಗಾಯಗೊಂಡಿದ್ದಾರೆ.

ಬುಧವಾರ ಮಧ್ಯಾಹ್ನ ಶೆಟ್ಟಿಗೆರೆ ಗ್ರಾಮದಿಂದ ಮೂರು ಕುಟುಂಬಗಳ ಸದಸ್ಯರು ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನದಲ್ಲಿ ಮಂತ್ರಾಲಯದ ಯಾತ್ರೆಗೆ ಹೊರಟಿದ್ದರು.



ದೇವರ ದರ್ಶನಕ್ಕೂ ಮುನ್ನವೇ ಈ ದುರ್ಘಟನೆ ಸಂಭವಿಸಿರುವುದು ಕುಟುಂಬಸ್ಥರು ಹಾಗು ಗ್ರಾಮಸ್ಥರಲ್ಲಿ ಆಘಾತ ಮೂಡಿಸಿದೆ.


ಗುರುವಾರ ಬೆಳಿಗ್ಗೆ ಚಿಲಕನಡೋಣ ಗ್ರಾಮದ ಬಳಿ ಯಾತ್ರಿಗಳಿದ್ದ ವಾಹನಕ್ಕೆ ಬೀದರ್‌ನಿಂದ ತುಮಕೂರಿನತ್ತ ಸಾಗುತ್ತಿದ್ದ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ. ಡಿಕ್ಕಿಯ ತೀವ್ರತೆಗೆ ಸ್ಥಳದಲ್ಲೇ 8 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಘಟನೆಯ ಬಳಿಕ ಗ್ರಾಮದಲ್ಲಿ ನೀರವ ಮೌನ ಆವರಿಸಿದ್ದು, ಒಂದೇ ಕುಟುಂಬದ ಆರು ಮಂದಿ ಸಾವಿಗೀಡಾದ ವಿಚಾರ ಎಲ್ಲರನ್ನು ಕಣ್ಣೀರು ತರಿಸುತ್ತಿದೆ. ಈ ಸಂಬಂಧ ಟ್ಯಾಂಕರ್ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿ ಗಾಯಾಳುಗಳ ಸ್ಥಿತಿಯ ಬಗ್ಗೆ ವಿಚಾರಿಸಿದರು.

**ಶಾಸಕ ಹೆಚ್.ಕೆ. ಸುರೇಶ್ ಸಂತಾಪ**

ರಾಘವೇಂದ್ರ ಸ್ವಾಮಿ ದರ್ಶನಕ್ಕೆ ತೆರಳುತ್ತಿದ್ದ ವೇಳೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದ ಒಂದೇ ಕುಟುಂಬದ ಆರು ಮಂದಿ ಮೃತಪಟ್ಟ ಘಟನೆಗೆ ಶಾಸಕ ಹೆಚ್.ಕೆ. ಸುರೇಶ್ ತೀವ್ರ ಸಂತಾಪ ವ್ಯಕ್ತಪಡಿಸಿ, ಘಟನೆ ತಿಳಿದು ಮನಸ್ಸಿಗೆ ಆಘಾತವಾಗಿದ್ದು, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗು ಕುಟುಂಬಸ್ಥರಿಗೆ ಈ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

# ಹಲವೆಡೆ ದಿಢೀರ್ ಗಾಳಿ-ಮಳೆ ಆರ್ಭಟ

## ವಿದ್ಯುತ್ ತಂತಿ ಮೇಲೆ ಮುರಿದು ಬಿದ್ದ ಮರ | ವಾಹನಗಳು ಜಖಂ



• ಪ್ರಜೋದಯ ವರದಿ

**ಹಾಸನ :** ಹಲವು ದಿನಗಳಿಂದ ಬಿಸಿಲಿನ ಝಳದಿಂದ ಕಂಗೆಟ್ಟಿದ್ದ ಜನರಿಗೆ ಗುರುವಾರ ಸಂಜೆ ದಿಢೀರ್ ಸುರಿದ ಬಿರುಗಾಳಿ ಸಹಿತ ಮಳೆ ಕೊಂಚ ನೆಮ್ಮದಿ ತಂದರೂ, ಗಾಳಿಯ ಆರ್ಭಟದಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಸಂಜೆ 5.45ರ ಸುಮಾರಿಗೆ ಆರಂಭವಾದ ಮಳೆ ಸುಮಾರು 45 ನಿಮಿಷಗಳ ಕಾಲ ಸುರಿಯಿತು. ಜೋರು ಗಾಳಿ, ಗುಡುಗಿನೊಂದಿಗೆ ಬಂದ ಮಳೆ ನಗರದಲ್ಲಿ ವಾಹನ, ಜನರ ಸಂಚಾರವನ್ನು ಅಸ್ತವ್ಯಸ್ತಗೊಳಿಸಿತು.

ವಿದ್ಯಾನಗರದ ಕೆನರಾ ಬ್ಯಾಂಕ್ ಸಮೀಪ ಭಾರೀ ಗಾಳಿ-ಮಳೆಗೆ ಬೃಹತ್ ಮರವೊಂದು ಮುರಿದು ಬಿದ್ದಿದೆ. ಮರ ಬಿದ್ದ ರಭಸಕ್ಕೆ ಪಕ್ಕದಲ್ಲಿದ್ದ ವಿದ್ಯುತ್ ಕಂಬವೂ ತುಂಡಾಗಿದೆ. ಮರ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಕಾರು, ಆಟೋ, ಬೈಕ್‌ಗಳ ಮೇಲೆ ಬಿದ್ದ ಪರಿಣಾಮ ವಾಹನಗಳು ಜಖಂಗೊಂಡಿವೆ. ಅದೃಷ್ಟವಶಾತ್ ಈ ವೇಳೆ ವಾಹನದೊಳಗೆ ಯಾರೂ ಇಲ್ಲದ ಕಾರಣ ಪ್ರಾಣಾಪಾಯ ತಪ್ಪಿದೆ. ಮರ ಮತ್ತು ವಿದ್ಯುತ್ ಕಂಬ ರಸ್ತೆಯ ಮಧ್ಯಭಾಗಕ್ಕೆ ಬಿದ್ದಿದ್ದರಿಂದ ಈ ಭಾಗದಲ್ಲಿ ಕೆಲ ಕಾಲ ವಾಹನ ಸಂಚಾರ ಸ್ಥಗಿತಗೊಂಡಿತು.

ಮರ ಬಿದ್ದು ವಿದ್ಯುತ್ ಕಂಬ ಮುರಿದು ವಿದ್ಯುತ್ ತಂತಿಗಳು ರಸ್ತೆಗೆ ಬಿದ್ದಿವೆ. ಸುರಕ್ಷತಾ ದೃಷ್ಟಿಯಿಂದ ಆ ಭಾಗದ ವಿದ್ಯುತ್ ಸಂಪರ್ಕವನ್ನು ಮೊದಲೇ ಸ್ಥಗಿತಗೊಳಿಸಲಾಯಿತು. ಸ್ಥಳಕ್ಕೆ ಅಗ್ನಿಶಾಮಕ ದಳ ಹಾಗು ಸೆಸ್ಕಾಂ ಸಿಬ್ಬಂದಿ ಧಾವಿಸಿ, ಮರದ ಕೊಂಬೆಗಳು, ವಿದ್ಯುತ್ ಕಂಬ ಮತ್ತು ತಂತಿಗಳನ್ನು ತೆರವುಗೊಳಿಸಿದರು.

ಮಳೆಯ ಆರ್ಭಟಕ್ಕೆ ಮಳೆ ನೀರು ಹಲವೆಡೆ ಚರಂಡಿಗಳಲ್ಲಿ ಉಕ್ಕಿ ಹರಿದು ರಸ್ತೆಗಳಿಗೆ ಹರಿದ ಪರಿಣಾಮ ವಾಹನ ಸವಾರರು ತೀವ್ರ ತೊಂದರೆ ಅನುಭವಿಸಿದರು. ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನಿಂತು ಸಣ್ಣ ಪ್ರಮಾಣದ ಜಲಾವೃತ ಪರಿಸ್ಥಿತಿ ನಿರ್ಮಾಣವಾಗಿದ್ದು, ದ್ವಿಚಕ್ರ ವಾಹನ ಸವಾರರು ಹಾಗು ಪಾದಚಾರಿಗಳು ಪರದಾಡುವಂತಾಯಿತು. ಬಿಸಿಲು ಬೇಗೆಯಿಂದ ಬಳಲುತ್ತಿದ್ದ ಜನರಿಗೆ ಮಳೆ ತಂಪು ತಂದರೂ, ಏಕಾಏಕಿ ಸುರಿದ ಮಳೆಯಿಂದ ತೊಂದರೆ ಅನುಭವಿಸಿದರು.

**ಸಕಲೇಶಪುರ ತಾಲ್ಲೂಕಿನಲ್ಲೂ ಮಳೆ**

ಮಲೆನಾಡು, ಪಶ್ಚಿಮಘಟ್ಟ ಭಾಗದಲ್ಲೂ ಗುರುವಾರ ಸಂಜೆ ಮಳೆ ಸುರಿಯಿತು. ಹೆತ್ತೂರು, ಯಸಳೂರು, ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ. ಎರಡ್ಮೂರು ದಿನಗಳಿಂದ ಸಂಜೆ ವೇಳೆಗೆ ಮೋಡದ ವಾತಾವರಣವಿದ್ದರೂ ಮಳೆ ಸುರಿಯದೆ ಕಾಫಿ ಬೆಳೆಗಾರರಲ್ಲಿ ನಿರಾಶೆ ಮೂಡಿಸಿತ್ತು. ಗುರುವಾರ ಸುರಿದ ಮಳೆ ಕೊಂಚ ನೆಮ್ಮದಿ ತರಿಸಿತು.

# ಸಾಕಾನೆ ಸುಗ್ರೀವ ದಾಳಿ: ಕಾವಾಡಿಗನಿಗೆ ಗಂಭೀರ ಗಾಯ

## ಕಾರ್ಯಾಚರಣೆ ಸ್ಥಗಿತ: ಪರಾರಿಯಾಗಿದ್ದ ಪುಂಡಾನೆ ಮೇಲೆ ಡ್ರೋಣ್ ಕಣ್ಣು

• ಪ್ರಜೋದಯ ವರದಿ

**ಬೇಲೂರು:** ರೈತನನ್ನು ಬಲಿ ಪಡೆದಿದ್ದ ಪುಂಡಾನೆ ಸೆರೆ ಕಾರ್ಯಾಚರಣೆಗೆ ಮತ್ತಿಗೋಡು ಸಾಕಾನೆ ಶಿಬಿರದಿಂದ ಬಂದಿದ್ದ ಸುಗ್ರೀವ ಸಾಕಾನೆ ಕಾವಾಡಿಗ ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿರುವ ಘಟನೆ ತಾಲ್ಲೂಕಿನ ಬಿಕ್ಕೋಡು ಆನೆ ಶಿಬಿರದಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ. ಗಾಯಾಳು ರಾಜು ಅವರಿಗೆ ಹಿಮ್ಸ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬುಧವಾರ ಸೆರೆ ಸಿಕ್ಕ ಬಳಿಕ ಪರಾರಿಯಾಗಿದ್ದ ಪುಂಡಾನೆ ಸೆರೆ ಕಾರ್ಯಾಚರಣೆಗೆ ಗುರುವಾರ ಬೆಳಿಗ್ಗೆ ಆನೆಯನ್ನು ಸ್ವಚ್ಛಗೊಳಿಸುವ ವೇಳೆ ಏಕಾಏಕಿ ಆಕ್ರೋಶಗೊಂಡ ಸುಗ್ರೀವ, ದಂತದಿಂದ ಹೊಟ್ಟೆ ಭಾಗಕ್ಕೆ ಬಲವಾಗಿ ತೂರಿದ ಪರಿಣಾಮ ರಾಜು ಸ್ಥಳದಲ್ಲೇ ಕುಸಿದು ಬಿದ್ದಿದ್ದಾರೆ. ತಕ್ಷಣ ಸಿಬ್ಬಂದಿ ಧಾವಿಸಿ ರಕ್ಷಿಸಿ, ತಾಲ್ಲೂಕು ಆಸ್ಪತ್ರೆಗೆ, ಬಳಿಕ ಹಿಮ್ಸ್‌ಗೆ ದಾಖಲಿಸಿದರು.



**"ಸಾಕಾನೆ ಸುಗ್ರೀವ ಕಾವಾಡಿಗನ ಮೇಲೆ ದಾಳಿ ನಡೆಸಿರುವುದು ಅತ್ಯಂತ ನೋವು ತಂದಿದೆ. ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರೂ ಅವಘಡ ಸಂಭವಿಸಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಹೆಚ್ಚುವರಿ ಎಚ್ಚರಿಕೆ ವಹಿಸಲಾಗುವುದು.**

**-ಸೌರಭ್ ಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ**

ಕಾವಾಡಿಗ ರಾಜು ಅವರ ಹೊಟ್ಟೆ ಭಾಗಕ್ಕೆ ದಂತ ತೂರಿದ ಪರಿಣಾಮ ಸಣ್ಣ ಕರುಳುಗಳಿಗೆ ಹಾನಿಯಾಗಿದೆ. ತುರ್ತು ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದ್ದು, ಸದ್ಯ ಚೇತರಿಕೆಯ ಲಕ್ಷಣಗಳು ಕಂಡು ಬರುತ್ತಿವೆ ಎಂದು ವೈದ್ಯರು ತಿಳಿಸಿದ್ದಾರೆ.

ಘಟನೆಯ ನಂತರ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಸುಗ್ರೀವ, ಲಕ್ಷ್ಮಣ ಆನೆಗಳನ್ನು ಶಿಬಿರಕ್ಕೆ ವಾಪಾಸ್ ಕಳುಹಿಸಲಾಗಿದೆ. ಬೇರೆ ಎರಡು ಆನೆಗಳು ಬಂದ ಬಳಿಕವೇ ಕಾರ್ಯಾಚರಣೆ ಪುನರಾರಂಭ ಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಕಾರ್ಯಾಚರಣೆಯ ವೇಳೆ ತಪ್ಪಿಸಿಕೊಂಡು ಪರಾರಿಯಾದ ಒಂಟಿ ಸಲಗದ ಚಲನವಲನಗಳ ಮೇಲೆ ಅರಣ್ಯ ಇಲಾಖೆ ಕಣ್ಣಿಟ್ಟಿದೆ. ಅದರ ಟ್ರ್ಯಾಕ್ ಪತ್ತೆ ಮಾಡಲು ವಿಶೇಷ ತಂಡವನ್ನು ನಿಯೋಜಿಸಲಾಗಿದ್ದು, ನಿರಂತರ ಅದರ ಹಿಂಬಾಲನೆ ನಡೆಸಲಾಗುತ್ತಿದೆ. ಇಟಿಎಫ್ ಸಿಬ್ಬಂದಿ ಡ್ರೋಣ್ ಬಳಿಸಿ ಕಾಡಾನೆಯ ಚಲನ-ವಲನದ ಮೇಲೆ ನಿಗಾ ವಹಿಸಿದ್ದಾರೆ. ರೈತನೊಬ್ಬರನ್ನು ಬಲಿ ಪಡೆದಿರುವ ಈ ಆನೆ, ಸೆರೆಯ ವೇಳೆ ತಪ್ಪಿಸಿಕೊಂಡಿರುವುದು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆತಂಕಕ್ಕೆ ಕಾರಣವಾಗಿದೆ.

### ಕಾಡಾನೆ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತ

ಸುಗ್ರೀವ ದಾಳಿಯಿಂದಾಗಿ ಗುರುವಾರ ನಡೆಯಬೇಕಿದ್ದ ಒಂಟಿ ಸಲಗ ಸೆರೆ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಈಗಾಗಲೇ ಎರಡು ಸಾಕಾನೆಗಳನ್ನು ವಾಪಾಸ್ ಕಳುಹಿಸಲಾಗಿದೆ. ಹೊಸ ಆನೆಗಳನ್ನು ತರಲು ನಾಗರಹೊಳೆ ಸೇರಿ ವಿವಿಧ ಶಿಬಿರಗಳಿಗೆ ಮನವಿ ಮಾಡಲಾಗಿದೆ. ಅನುಮತಿ ದೊರೆತು ಎರಡು ಆನೆಗಳು ಬಂದ ತಕ್ಷಣ ಕಾರ್ಯಾಚರಣೆ ಪುನರಾರಂಭಗೊಳ್ಳಲಿದೆ. ಈಗ ನಮ್ಮ ಹತ್ತಿರ ನಾಲ್ಕು ಆನೆಗಳು ಮಾತ್ರ ಇದ್ದು, ಅವುಗಳಲ್ಲಿ ಕಾರ್ಯಾಚಾರಣೆ ಮಾಡಲು ಸಾಧ್ಯವಿಲ್ಲವೆಂದು ಅರಣ್ಯ ಅಧಿಕಾರಿ ತಿಳಿಸಿದ್ದಾರೆ.

# ಉಚಿತ ಆರೋಗ್ಯ ತಪಾಸಣಾ ಶಿಬಿರ

ಹಾಸನ : ಪಟ್ಟಣದ ಗಾಯತ್ರಿ ಪತ್ತಿನ ಸಹಕಾರ ಸಂಘ ಹಾಗು ಹಾಸನದ ಇಂಡಿಯಾನಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಏ.17 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2.30ರವರೆಗೆ ಸಾರ್ವಜನಿಕರು ಹಾಗು ಷೇರುದಾರರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಆರೋಗ್ಯ ತಪಾಸಣೆಗೆ ಬರುವವರು ತಮ್ಮ ಹಿಂದಿನ ಚಿಕಿತ್ಸಾ ದಾಖಲೆಗಳನ್ನು ತರುವಂತೆ ಮನವಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗಾಯತ್ರಿ ಪತ್ತಿನ ಸಹಕಾರ ಸಂಘದ ಮೊಬೈಲ್-9008922234, 9448655187, 9242272333 ಸಂಪರ್ಕಿಸಬಹುದು.

# ಕೆರೆಯಲ್ಲಿ ಮುಳುಗಿ ಸಹೋದರರ ದುರ್ಮರಣ

• ಪ್ರಜೋದಯ ವರದಿ

**ಜಾವಗಲ್:** ಕುರಿ ಮೈ ತೊಳೆಯಲು ತೆರಳಿದ್ದ ಸಹೋದರರಿಬ್ಬರು ಆಕಸ್ಮಿಕವಾಗಿ ಕೆರೆಯಲ್ಲಿ ಮುಳುಗಿ ಮೃತಪಟ್ಟ ಧಾರುಣ ಘಟನೆ ಜಾವಗಲ್‌ನ ದೊಡ್ಡ ಕೆರೆಯಲ್ಲಿ ಗುರುವಾರ ಸಂಭವಿಸಿದೆ. ಪಟ್ಟಣದ ಜನತಾ ಬಡಾವಣೆಯ ನಿವಾಸಿ ಮೊಹಮ್ಮದ್ ಮುನೀರ್ ಅವರ ಮಕ್ಕಳಾದ ಇಮ್ರಾನ್ (15) ಮತ್ತು ಯಾಸಿನ್ (13) ಮೃತ ಬಾಲಕರು.

ಶಾಲೆಗೆ ರಜೆ ಇರುವ ಹಿನ್ನಲ್ಲೆಯಲ್ಲಿ ಮಕ್ಕಳಿಬ್ಬರು ಮಧ್ಯಾಹ್ನ 3.30ರ ವೇಳೆಗೆ ಕುರಿ ಮೇಯಿಸಿಕೊಂಡು, ಕುರಿಗಳ ಮೈ ತೊಳೆದುಕೊಂಡು ಬರುತ್ತೇವೆಂದು ಮನೆಯಲ್ಲಿ ತಿಳಿಸಿ ದೊಡ್ಡಕೆರೆಯತ್ತ ತೆರಳಿದ್ದರು. ಸಂಜೆ ಸುಮಾರು 4.30ರ ವೇಳೆಗೆ ಕುರಿ ಮೈ ತೊಳೆಯುತ್ತಿದ್ದ ವೇಳೆ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಸುದ್ದಿ ತಿಳಿದ ತಕ್ಷಣ ಮಕ್ಕಳಿಬ್ಬರು ಮೃತಪಟ್ಟಿರುವುದನ್ನು ಕಂಡು ಕುಟುಂಬ ಸ್ಥರ ಆಕ್ರಂಧನ ಮುಗಿಲು ಮುಟ್ಟಿತ್ತು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣೇಗೌಡ ಅವರ ತೋಟದ ಸಮೀಪವಿರುವ ದೊಡ್ಡಕೆರೆಯಲ್ಲಿ ಈ ದುರ್ಘಟನೆ



ಸಂಭವಿಸಿದೆ. ಈ ಸಂಬಂಧ ಬಾಣಾವರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತದೇಹಗಳನ್ನು ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

# ಡಿಎ ಪಾವತಿಗೆ ಬಿಎಸ್‌ಎನ್‌ಎಲ್ ನಿವೃತ್ತ ನೌಕರರ ಆಗ್ರಹ




• ಪ್ರಜೋದಯ ವರದಿ

**ಹಾಸನ:** ಡಿಎ ಪಾವತಿ ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬಿಎಸ್‌ಎನ್‌ಎಲ್ ನಿವೃತ್ತ ನೌಕರರ ಸಂಘಟನೆಗಳ ವತಿಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ನಗರದ ಬಿ.ಎಂ.ರಸ್ತೆ ಬಳಿ ಇರುವ ಬಿಎಸ್‌ಎನ್‌ಎಲ್ ಕಚೇರಿ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಕ್ಕೂ ಅಧಿಕ ನಿವೃತ್ತ ನೌಕರರು ಭಾಗವಹಿಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ತಮ್ಮ ಬೇಡಿಕೆಗಳನ್ನೊಳಗೊಂಡ ಫಲಕಗಳನ್ನು ಹಿಡಿದು ಘೋಷಣೆ ಕೂಗಿ ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದರು.

ಡಿಎ ಪಾವತಿ ತಡೆ ಹಿಡಿದಿರುವುದು ನಿವೃತ್ತ ನೌಕರರ ಜೀವನವನ್ನು ಸಂಕಷ್ಟಕ್ಕೆ ತಳ್ಳಿದೆ. ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಪಿಂಚಣಿದಾರರು ಆರ್ಥಿಕವಾಗಿ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ದಿನದಿಂದ ದಿನಕ್ಕೆ ಬೆಲೆ ಏರಿಕೆ ಹೆಚ್ಚಾಗುತ್ತಿದ್ದು, ಸಾಮಾನ್ಯ ಜೀವನ ನಡೆಸುವುದೇ ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಡಿಎ ತಡೆ ಹಿಡಿದಿರುವುದು ಪಿಂಚಣಿದಾರರ ಬದುಕಿಗೆ ಮತ್ತಷ್ಟು ಹೊರೆ ತಂದಿದೆ. ಸರ್ಕಾರ ತಕ್ಷಣ ಕ್ರಮ ಕೈಗೊಂಡು ಬಾಕಿ ಇರುವ ಡಿಎ ಬಿಡುಗಡೆ ಮಾಡಬೇಕು ಹಾಗು ಪೆನ್ಷನ್ ಸಂಬಂಧಿತ ಎಲ್ಲಾ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ನಿವೃತ್ತ ನೌಕರ ಎಸ್.ನಾಗರಾಜು ಅವರು, ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಹೊಸ ನಿಯಮಗಳನ್ನು ಸೇರಿಸುವ ಮೂಲಕ ಪೆನ್ಷನ್ ರಿವಿಷನ್ ಹಾಗು ಟಿಎ ನೀಡುವ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡಿದೆ. ಇತ್ತೀಚಿನ ನೀತಿಗಳ ಪ್ರಕಾರ ಭವಿಷ್ಯದಲ್ಲಿ ಯಾವುದೇ ಪೇ ಕಮೀಷನ್ ಅಥವಾ ರಿವಿಷನ್ ನಡೆದರೂ ಅದರ ಅನುಸಾರ ಪಿಂಚಣಿ ಪರಿಷ್ಕರಣೆ ಮಾಡುವುದಿಲ್ಲ ಹಾಗು ಟಿಎ ನೀಡುವುದಿಲ್ಲವೆಂಬ ರೀತಿಯ ಅಸ್ಪಷ್ಟತೆ ಉಂಟಾಗಿದೆ ಎಂದು ಹೇಳಿದರು. ನಿವೃತ್ತ ನೌಕರರಾದ ರಾಜು, ಶಿವಣ್ಣ, ಸಂಪತ್ ಕುಮಾರ್, ಕಾಂತರಾಜು, ಐಯ್ಯಂಗಾರ್ ಇತರರಿದ್ದರು.

## ಕೊಡಗು ಭಾಗದ ಕಾಡಾನೆಗಳಿಗೆ ತಾತ್ಕಾಲಿಕ ಬ್ರೇಕ್ | ಚಿಕ್ಕಮಗಳೂರು ಕಡೆಯಿಂದ ನಿರಂತರ ಸಂಚಾರ

# 35 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಸುಸ್ತಾದ ಸರ್ಕಾರ

**ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ಶಾಶ್ವತ ಪರಿಹಾರ ಕಂಡು ಹಿಡಿಯುವಲ್ಲಿ ಆಡಳಿತ ನಡೆಸಿದ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ. ತಾತ್ಕಾಲಿಕ ಪರಿಹಾರವಾಗಿ ರೈಲ್ವೆ ಕಂಬಿ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಸರ್ಕಾರ ಅನುದಾನ ಒದಗಿಸಲು ನಿರ್ಲಕ್ಷ್ಯ ತೋರಿರುವುದರಿಂದ ಜಿಲ್ಲೆಯಲ್ಲಿ ಈವರೆಗೂ ಕೇವಲ 35 ಕಿಲೋ ಮೀಟರ್ ಮಾತ್ರ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿದೆ.

ಈ ಹಿಂದೆ ಸರ್ಕಾರ ಬಜೆಟ್‌ನಲ್ಲಿ ಜಿಲ್ಲೆಯಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿಯೇ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುತ್ತಿತ್ತು. ಅದರಿಂದಲೇ ಜಿಲ್ಲೆಯಲ್ಲಿ ಇಲ್ಲಿಯವರೆಗೆ 35 ಕಿ.ಮೀ. ರೈಲ್ವೆ ಕಂಬಿ ತಡೆಗೋಡೆ ನಿರ್ಮಾಣ ಮಾಡಲಾಗಿದೆ. ಆದರೆ, ಈಗಿನ ಕಾಂಗ್ರೆಸ್ ಸರ್ಕಾರ ಕಳೆದ ಎರಡು ಬಜೆಟ್‌ಗಳಲ್ಲಿ ಅನುದಾನ ಮೀಸಲಿಡದೆ ಇರುವುದರಿಂದ ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಕಾಮಗಾರಿ ಕುಂಟುತ್ತಾ ಸಾಗಿದೆ.

ಕೊಡಗು ಜಿಲ್ಲೆಯೊಂದಿಗೆ ಗಡಿ ಹಂಚಿಕೊಂಡಿರುವ ಸಕಲೇಶಪುರ, ಆಲೂರು ತಾಲ್ಲೂಕು ಭಾಗಕ್ಕೆ ಪಕ್ಕದ ಕೊಡಗು ಭಾಗದಿಂದ ವಲಸೆ ಬರುವ ಕಾಡಾನೆಗಳ ಹಿಂಡನ್ನು ತಡೆದು ನಿಲ್ಲಿಸಲು ಅರಣ್ಯ ಇಲಾಖೆ ಕೈಗೊಂಡಿರುವ ರೈಲ್ವೆ ಬ್ಯಾರಿಕೇಡ್ ಕಾಮಗಾರಿ ನಿರೀಕ್ಷಿತ ಮಟ್ಟದ ಯಶಸ್ಸು ಕಾಣದಿದ್ದರೂ ತಾತ್ಕಾಲಿಕ ಪರಿಹಾರವನ್ನು ಒದಗಿಸಿದೆ.

ಅರಣ್ಯ ಇಲಾಖೆಯಿಂದ ಇದುವರೆಗೂ ಒಟ್ಟು 35 ಕಿಲೋ ಮೀಟರ್ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿದೆ. ಕಾಡಾನೆಗಳು ರಸ್ತೆ ದಾಟುವಾಗ ವಾಹನ ಸವಾರರು, ದಾರಿಹೋಕರ ಮೇಲೆ ದಾಳಿ ಮಾಡುವುದನ್ನು ತಪ್ಪಿಸಲು 13 ಕಬ್ಬಿಣದ ಗೇಟ್‌ಗಳನ್ನು ನಿರ್ಮಿಸಲಾಗಿದೆ. ಇದರಿಂದಾಗಿ ಕೊಡಗು ಭಾಗದಿಂದ ಹಾಸನ ಜಿಲ್ಲೆಗೆ ಬರುವ ಕಾಡಾನೆಗಳಿಗೆ ತಾತ್ಕಾಲಿಕ ಬ್ರೇಕ್ ಬಿದ್ದಂತಾಗಿದ್ದು, ಕಾಡಾನೆ ಪೀಡಿತ ಪ್ರದೇಶದ ಜನರು ಕೊಂಚ ನಿಟ್ಟುಸಿರು ಬಿಟ್ಟಿದ್ದಾರೆ.

ಆದರೆ, ಚಿಕ್ಕಮಗಳೂರು ಜಿಲ್ಲೆಯೊಂದಿಗೆ ಗಡಿ ಹಂಚಿಕೊಂಡಿರುವ ಬೇಲೂರು ತಾಲ್ಲೂಕು ಭಾಗದಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡದಿರುವುದರಿಂದ ನಿರಂತರವಾಗಿ ಕಾಡಾನೆ ಹಾವಳಿ ನಡೆಯುತ್ತಲೇ ಇದೆ. ಚಿಕ್ಕಮಗಳೂರು-ಬೇಲೂರು ನಡುವೆ ಕಾಡಾನೆಗಳು ಗುಂಪು ಗುಂಪಾಗಿ ಸಂಚಾರ ಮಾಡುತ್ತಿರುವುದರಿಂದ ಈ ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಡಾನೆ-ಮಾನವ ಸಂಘರ್ಷ ತೀವ್ರಗೊಂಡಿದೆ. ಹೀಗಾಗಿ ಈ ಭಾಗದಲ್ಲೂ ರೈಲ್ವೆ ಕಂಬಿ ತಡೆಗೋಡೆ ನಿರ್ಮಾಣ ಮಾಡಬೇಕೆಂಬ ಕೂಗು ಎದ್ದಿದೆ.

**90 ಅಮಾಯಕ ಜೀವಗಳು ಬಲಿ**

ಸಕಲೇಶಪುರ, ಆಲೂರು ಹಾಗು ಬೇಲೂರು ಭಾಗದ ಜನರನ್ನು ಬಿಟ್ಟು ಬಿಡದೆ ಕಾಡುತ್ತಿರುವ ಕಾಡಾನೆ ಸಮಸ್ಯೆಯಿಂದ ಕಾಫಿ ಬೆಳೆಗಾರರು, ರೈತರು, ಕೂಲಿ ಕಾರ್ಮಿಕರು ಹೈರಾಣಾಗಿ ಹೋಗಿದ್ದಾರೆ. ಇದುವರೆಗೂ 90 ಅಮಾಯಕ ಜೀವಗಳು ಕಾಡಾನೆಗಳ ದಾಳಿಗೆ ಬಲಿಯಾಗಿದ್ದು, ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ ನೂರಾರು ಹೋರಾಟಗಳು ನಡೆದಿದ್ದರೂ ಪ್ರಯೋಜನವಾಗಿಲ್ಲ.

ಕೊಡಗು ಭಾಗದಿಂದ ಕುಡಿಯುವ ನೀರು ಹಾಗು ಆಹಾರ ಅರಸಿ ಕಾಡಾನೆಗಳು ಆಲೂರು ಭಾಗದ ನದಿಯ ಹಿನ್ನೀರಿಗೆ ಬಂದು ಜಿಲ್ಲೆಯ ಮಲೆನಾಡು ಭಾಗ ಸೇರುತ್ತಿವೆ. ಅಲ್ಲದೆ ಬೆಳೆಗಳನ್ನು ನಾಶ ಮಾಡುವುದರ ಜೊತೆಗೆ ಅಮಾಯಕ ಜೀವಗಳನ್ನು ಬಲಿ ಪಡೆಯುತ್ತಿವೆ. ಈ ನಿಟ್ಟಿನಲ್ಲಿ ಅಕ್ಕಪಕ್ಕದ ಜಿಲ್ಲೆಯಿಂದ ಕಾಡಾನೆಗಳು ಬರದಂತೆ ತಡೆಯಲು 35 ಕಿಲೋ ಮೀಟರ್ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದ್ದು, ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶಿರಗಾವರ ಸೇತುವೆ ಸೇರಿ ಒಟ್ಟು ಹದಿಮೂರು ಕಡೆ ಕಬ್ಬಿಣದ ಗೇಟ್‌ಗಳನ್ನು ನಿರ್ಮಿಸಲಾಗಿದೆ. ಕಾಡಾನೆಗಳು ರಸ್ತೆ, ಸೇತುವೆ ದಾಟುವಾಗ ಗೇಟ್‌ಗಳನ್ನು ಬಂದ್ ಮಾಡಿದರೆ ಮನುಷ್ಯರ ಮೇಲೆ ದಾಳಿ ಮಾಡುವುದು ತಪ್ಪಲಿದೆ. ಇದರಿಂದ ಪಕ್ಕದ ಜಿಲ್ಲೆಯಿಂದ ಬರುವ ಕಾಡಾನೆಗಳಿಗೆ ಬ್ರೇಕ್ ಬಿದ್ದಂತಾಗಿದೆ. ಇದರಿಂದ ಕೊಂಚ ರಿಲೀಫ್ ಸಿಕ್ಕಂತಾಗಿದೆ ಹೊರತು ಶಾಶ್ವತ ಪರಿಹಾರ ಸಿಕ್ಕಿಲ್ಲ.



### ಜಿಲ್ಲೆಯಲ್ಲಿ 80 ಹೆಚ್ಚು ಕಾಡಾನೆಗಳು

ಸಕಲೇಶಪುರ, ಆಲೂರು ಬೇಲೂರು ಭಾಗದಲ್ಲಿ 80ಕ್ಕೂ ಹೆಚ್ಚು ಕಾಡಾನೆಗಳು ಬೀಡು ಬಿಟ್ಟಿದ್ದು, ಅವುಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡಬೇಕು. ಇಲ್ಲವಾದಲ್ಲಿ ಅರಣ್ಯ ಇಲಾಖೆಗೆ ಸೇರಿದ ಭೂಮಿ ಹಾಗೂ ರೈತರಿಗೆ ಪರಿಹಾರ ನೀಡಿ ಭೂಮಿ ಖರೀದಿಸಿ ಆನೆಧಾಮ ನಿರ್ಮಾಣ ಮಾಡಿ, ಕಾಡಾನೆಗಳಿಗೆ ಬೇಕಾದ ಆಹಾರ ಬೆಳೆದು ನೀರಿನ ಸೌಲಭ್ಯ ಕಲ್ಪಿಸಿ ಜಿಲ್ಲೆಯಲ್ಲಿರುವ ಎಲ್ಲಾ ಕಾಡಾನೆಗಳನ್ನು ಸ್ಥಳಾಂತರ ಮಾಡಿದರೆ ಮಾತ್ರ ಜಿಲ್ಲೆಯನ್ನು ಬೆಂಬಿಡದೆ ಕಾಡುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿದಂತಾಗುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ, ರಾಜ್ಯ ಹಾಗೂ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಜನರು ಮನವಿ ಮಾಡಿದ್ದಾರೆ.

### ನಿಲ್ಲದ ಬೆಳೆ ನಾಶ, ಪ್ರಾಣ ಹಾನಿ

ರೈಲ್ವೆ ಬ್ಯಾರಿಕೇಡ್ ನಿರ್ಮಾಣದಿಂದ ಸಣ್ಣ ಪ್ರಮಾಣದ ಪರಿಹಾರ ಸಿಕ್ಕಿದೆ ಅಷ್ಟೇ. ಆದರೆ, ವರ್ಷದಿಂದ ವರ್ಷಕ್ಕೆ ಕಾಡಾನೆಗಳ ಸಂತತಿ ಹೆಚ್ಚುತ್ತಲೇ ಇದ್ದು, ಬೆಳೆ ನಾಶ, ಪ್ರಾಣ ಹಾನಿ ಮುಂದುವರೆಯುತ್ತಲೇ ಇದೆ. ಆಡಳಿತ ನಡೆಸಿದ ಸರ್ಕಾರಗಳು ಪರಿಹಾರದ ಚೆಕ್ ವಿತರಣೆ ಮಾಡಿ ಕೇವಲ ಭರವಸೆ ನೀಡಿ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದ್ದಾರೆಯೇ ಹೊರತು ಸುದೀರ್ಘ ಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಿಲ್ಲ. ಇನ್ನಾದರೂ ಸರ್ಕಾರಗಳ ಗಂಭೀರ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕೆಂಬುದು ಕಾಡಾನೆಗಳ ಉಪಟಳದಿಂದ ನಲುಗಿ ಹೋಗಿರುವ ಮಲೆನಾಡು ಜನರ ಒತ್ತಾಯವಾಗಿದೆ.

# ಕನ್ನಡದಲ್ಲಿ ವರ್ಷಕ್ಕೆ 250+ ಸಿನಿಮಾಗಳು

## ತೆರೆಕಂಡ್ರೂ ಯಶಸ್ಸು ಕಾಣೋದು ಕೆಲವೇ ಏಕೆ?

ಕನ್ನಡದಲ್ಲಿ ವರ್ಷಕ್ಕೆ 250ಕ್ಕೂ ಹೆಚ್ಚು ಸಿನಿಮಾಗಳು ಬಿಡುಗಡೆಯಾದರೂ ಸದ್ದು ಮಾಡೋದು ಸರಿಸುಮಾರು 10 ಚಿತ್ರಗಳು. ಇದು ಏಕೆ ಎಂಬುದರ ಬಗ್ಗೆ ಈಟಿವಿ ಭಾರತ ವರದಿಗಾರ ಎಂ.ಕೆ.ರವಿಕುಮಾರ್ ಜೊತೆ ಸಿನಿಪಂಡಿತರು ತಮ್ಮ ದೃಷ್ಟಿಕೋನ ಹಂಚಿಕೊಂಡಿದ್ದಾರೆ.

ಕನ್ನಡ ಚಿತ್ರರಂಗವು ಆತ್ಮವಿಶ್ವಾಸ ಮತ್ತು ನಿರಂತರ ಆವೇಗದೊಂದಿಗೆ 2025ಕ್ಕೆ ಕಾಲಿಟ್ಟಿತು. ಬಹುತೇಕ ಪ್ರತೀ ಶುಕ್ರವಾರ ಸಿನಿಮಾಗಳು ಚಿತ್ರಮಂದಿರ ತಲುಪಿದವು. ವರ್ಷದ ಅಂತ್ಯದ ವೇಳೆಗೆ ಉದ್ಯಮ ಪ್ರಮಾಣದಲ್ಲಿ ಐತಿಹಾಸಿಕವಾದದ್ದನ್ನು ಸಾಧಿಸಿತ್ತು. ಆದ್ರೆ, ಫಲಿತಾಂಶ ಏನಾಯ್ತು? ಎಲ್ಲವೂ ವಿಜಯವಾದವೇ? 255 ಚಲನಚಿತ್ರಗಳು ಬಿಡುಗಡೆಯಾದವು. ಈ ಪೈಕಿ 248 ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ್ರೆ, 7 ನೇರವಾಗಿ ಡಿಜಿಟಲ್ ಪ್ರವೇಶ ಪಡೆದುಕೊಂಡಿತು.

ಕನ್ನಡ ಚಿತ್ರರಂಗ ತನ್ನ 91 ವರ್ಷಗಳ ಪ್ರಯಾಣದಲ್ಲಿ 6,000ಕ್ಕೂ ಹೆಚ್ಚು ಚಿತ್ರಗಳ ಮೈಲಿಗಲ್ಲನ್ನು ಸದ್ದಿಲ್ಲದೇ ದಾಟಿಸಿತು. ಆದ್ರೆ ವಾಸ್ತವ ಏನು? ವರ್ಷಕ್ಕೆ ಹತ್ತಕ್ಕಿಂತ ಕಡಿಮೆ ಚಲನಚಿತ್ರಗಳು ನಿರ್ಮಾಪಕರ ಹೂಡಿಕೆಗಳನ್ನು ರಕ್ಷಿಸಿದವು, ಲಾಭ ತಂದುಕೊಟ್ಟವು. ಉಳಿದವು?. ಕೆಲವಂತೂ ವೆಚ್ಚವನ್ನು ಮರುಪಡೆಯಲು ವಿಫಲವಾದವು. ಪ್ರೇಕ್ಷಕರ ನಿರೀಕ್ಷೆಗಳು ಮತ್ತು ಇಂಡಸ್ಟ್ರಿಯಲ್ಲಿನ ನಿರ್ಮಾಣದ ನಡುವಿನ ಸಂಪೂರ್ಣ ಸಂಪರ್ಕ ಕಡಿತದಿಂದ ಈ ಹಿನ್ನಡೆ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

**ಹಿರಿಯ ನಟ ಸುಂದರ್ ರಾಜ್:**

**2025ರ ಚಂದನವನ:**

**ಅಂದಾಜು ಸಿನಿಮಾ ಬಿಡುಗಡೆ: 255.**

**ಚಿತ್ರಮಂದಿರಗಳಲ್ಲಿ ತೆರೆಕಂಡ ಚಲನಚಿತ್ರಗಳ ಸಂಖ್ಯೆ: 248.**

**ನೇರ ಒಟಿಟಿ ಎಂಟ್ರಿ: 7.**

**2025ರ ಅತ್ಯಂತ ಯಶಸ್ವಿ ಚಿತ್ರ**

**ಕಾಂತಾರಾ ಚಾಪ್ಟರ್ 1**

**ಒಟ್ಟು ಗ್ಲೋಬಲ್ ಕಲೆಕ್ಷನ್: 852.36 ಕೋಟಿ ರೂಪಾಯಿ.**

**ಇಂಡಿಯಾ ಗ್ರಾಸ್ ಕಲೆಕ್ಷನ್: 741.36 ಕೋಟಿ ರೂಪಾಯಿ.**

**ಇಂಡಿಯಾ ನೆಟ್ ಕಲೆಕ್ಷನ್: 622.48 ಕೋಟಿ ರೂಪಾಯಿ.**

**ಕೇವಲ ವಿದೇಶದ ಕಲೆಕ್ಷನ್: 111.00 ಕೋಟಿ ರೂಪಾಯಿ.**

### ಇಂದು ಕೆಲವೇ ಕೆಲ ಸಿನಿಮಾಗಳು ನಿಜವಾಗಿಯೂ ಪ್ರೇಕ್ಷಕರನ್ನು ಸಂಪರ್ಕಿಸುತ್ತಿವೆ, ಏಕೆ?

ಅಷ್ಟಕ್ಕೂ ಸಿನಿಮಾಗಳು ಸೋಲೋಕೆ ಅಥವಾ ಹಿನ್ನಡೆ ಕಾಣೋಕೆ ಅಥವಾ ನಿರೀಕ್ಷಿತ ಮಟ್ಟದಲ್ಲಿ ಸದ್ದು ಮಾಡದಿರೋಕ್ಕೆ ಶುರುವಾಗಿದ್ದು ಯಾವಾಗ? ಎಂದು ನೋಡಿದರೆ ಕಥೆಯನ್ನು ಪಕ್ಕಕ್ಕಿಟ್ಟು ಅದ್ದೂರಿತನಕ್ಕೆ ಜೋತುಬಿದ್ದಾಗ ಎನ್ನಬಹುದು. ಇದರಿಂದ ನಿಜವಾಗಿಯೂ ಆಗಿದ್ದೇನಂದ್ರೆ, ಕೆಲ ಹೀರೋಗಳು ಕಲಾವಿದರಾಗುವ ಬದಲು ಸ್ಟಾರ್ ನಟರಾದರು. ಅರ್ಥಪೂರ್ಣ ಪಾತ್ರವನ್ನು ರೂಪಿಸಬೇಕಾದ ನಿರ್ದೇಶಕರು ಹೀರೋಗೆ ಬಿಲ್ಡಪ್ ಕೊಡೋ ಡೈಲಾಗ್, ಸೀನ್ ಬರೆಯೋಕೆ ಕುಳಿತರು. ಕಥೆ ಸೈಡಿಗೆ ಹೋಯ್ತು. ಮೇಕಿಂಗ್ ಹೈಲೆಟ್ ಆಯ್ತು. ಜೊತೆಗೆ ದಶಕಗಳ ಕಾಲ ಕಥೆಯ ಹುಡುಕಾಟ ಬಿಟ್ಟು, ರೀಮೇಕ್ ಬೆನ್ನು ಹತ್ತಿ, ಕಥೆಗಾರರನ್ನೂ ಸೈಡಿಗೆ ತಳ್ಳಿದ್ರು ಅನ್ನೋದು ಹೆಚ್ಚಿನ ಸಂಖ್ಯೆಯ ಸಿನಿಪ್ರಿಯರ ಅಭಿಪ್ರಾಯ. ಹೆಸರೇಳಲಿಚ್ಛಿಸದ ಸಿನಿಗಣ್ಯರ ಅಭಿಪ್ರಾಯವೂ ಬಹುತೇಕ ಇದೇ ರೀತಿ ಇದೆ. ಪ್ರಸ್ತುತ ವರ್ಷಕ್ಕೆ ಕನ್ನಡದಲ್ಲಿ ಸುಮಾರು 250ಕ್ಕೂ ಹೆಚ್ಚು ಸಿನಿಮಾಗಳು ಬಿಡುಗಡೆ ಆಗುತ್ತಿವೆ. ಆದ್ರೆ ಸಕ್ಸಸ್ ಮಾತ್ರ ಕಡಿಮೆ. ಚಿತ್ರರಂಗ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಬಗ್ಗೆ ಖ್ಯಾತ ನಟ-ನಿರ್ದೇಶಕ-ನಿರ್ಮಾಪಕ ಡಾರ್ಲಿಂಗ್ ಕೃಷ್ಣ, ಹಿರಿಯ ನಟ ಸುಂದರ್ ರಾಜ್ ಹಾಗೂ ಸಿನಿಮಾ ಪ್ರದರ್ಶಕರ ವಲಯದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

**ಯಶಸ್ಸಿ ನಲೆಯಲ್ಲಿ ಸು ಫ್ರಮ್ ಸೋ ನಿರ್ಮಾಪಕ:** ಅದಕ್ಕೂ ಮೊದಲು, ವಿಶ್ವಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ 2025ರಲ್ಲಿ ಅತಿ ಹೆಚ್ಚು ಗಳಿಕೆ ಮಾಡಿದ ಟಾಪ್ 10 ಕನ್ನಡ ಚಲನಚಿತ್ರಗಳನ್ನು ನೋಡೋಣ ಬನ್ನಿ:

1. **ಕಾಂತಾರ ಚಾಪ್ಟರ್ 1 – 852.36 ಕೋಟಿ ರೂಪಾಯಿ.**
2. **ಸು ಫ್ರಮ್ ಸೋ – 123.94 ಕೋಟಿ ರೂಪಾಯಿ.**
3. **ದಿ ಡೆವಿಲ್ – 34.68 ಕೋಟಿ ರೂಪಾಯಿ.**
4. **ಮಾರ್ಕ್ – 31.87 ಕೋಟಿ ರೂಪಾಯಿ.**
5. **45 – 15.87 ಕೋಟಿ ರೂಪಾಯಿ.**
6. **ಎಕ್ಕ – 11.42 ಕೋಟಿ ರೂಪಾಯಿ.**
7. **ಮಾದೇವ – 7.79 ಕೋಟಿ ರೂಪಾಯಿ.**
8. **ಭೂ ಮಂತರ್ – 6.57 ಕೋಟಿ ರೂಪಾಯಿ.**
9. **ಬ್ರ್ಯಾಟ್ – 5.93 ಕೋಟಿ ರೂಪಾಯಿ.**
10. **ಯುದ್ಧಕಾಂಡ ಅಧ್ಯಾಯ 2 – 5.51 ಕೋಟಿ ರೂಪಾಯಿ.**

### ಹಿರಿಯ ನಟ, ನಿರ್ಮಾಪಕ ವಲಯದ ಉಪಾಧ್ಯಕ್ಷ ಸುಂದರ್ ರಾಜ್ ಹೇಳೋದೇನು?

**ವಿಕಸನ:** ಎವಲ್ಯೂಷನ್ ಪ್ರಮುಖ ಕಾರಣ. ಬದುಕು, ವ್ಯಾಪಾರ ಅಥವಾ ವಸ್ತು... ಯಾವುದೇ ಇರಲಿ ಮನುಷ್ಯ ಸುಲಭ ಅನಿಸಿದ್ದನ್ನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಉದಾಹರಣೆಗೆ, ಶಿಲಾಯುಗ. ಕಲ್ಲೇ ಪ್ರಧಾನವಾಗಿತ್ತು. ಬರುಬರುತ್ತಾ ಅದು ತಾಳೆಗರಿಗೆ ಶಿಫ್ಟ್ ಆಯ್ತು. ಆಮೇಲೆ ಪೇಪರ್ ನಂತು. ಹೀಗೆ ನಂತರ ಸಿನಿಮಾ ಆಯಿತು. ಮೊದಲು ಮೂಕಿ ಚಿತ್ರ ಮೂಡಿಬಂತು. ಫೋಟೋಗ್ರಫಿ ಬಂತು. ಫೋಟೋ ಹಾಕುತ್ತಾ ಹಾಕುತ್ತಾ ಮೂವಿಂಗ್ ಮಾಡಿದ. ಅದು ಟಾಕಿ ಆಯಿತು. ಟಾಕಿ ಇದ್ದದ್ದು ಬ್ಲ್ಯಾಕ್ ಆ್ಯಂಡ್ ವೈಟ್ ಆಯಿತು. ಆದಾದ ಬಳಿಕ ಕಲರ್ ಸಿನಿಮಾ ಮಾಡಿದ. ಫೈನಲಿ, ಅದ್ಯಾವಾಗ ಹೈ-ಲೆವೆಲ್ ಟೆಕ್ನಾಲಜಿ ಬಂತೋ ಅಂದ್ರೆ, ಮೊಬೈಲ್, ಲ್ಯಾಪ್‌ಟಾಪ್‌ನಲ್ಲಿಯೇ ಎಲ್ಲವೂ ಲಭ್ಯವಾಯಿತು ಅಲ್ಲಿಯೇ ಎಲ್ಲವನ್ನೂ ನೋಡುವಾಗೆ ಆಯಿತು.



## ಸಿನಿಪಂಡಿತರ ಮಾತು

**ಮನೆಯಲ್ಲಿಯೇ ಕುಳಿತು ವೀಕ್ಷಿಸುವ ಟ್ರೆಂಡ್ ಹೆಚ್ಚಳ:** ಒಂದು ಕಾಲದಲ್ಲಿ ಒಂದು ಟೆಲಿಫೋನ್ ಮನೆಗೆ ಬಂದ್ರೆ ಅವನು ಹಣವಂತ ಅಂತಾ ಕರೆಯೋರು. ಹಾಗೇ, ಆಗಿನ ಕಾಲದಲ್ಲಿ ದೀಪಗಳ ಮೂಲಕ ನಾಟಕಗಳನ್ನು ಮಾಡುತ್ತಿದ್ದರು. ಈಗ ಇವೆಲ್ಲವೂ ಬದಲಾಗಿದೆ. ಬದಲಾವಣೆಯಿಂದ ಚಿತ್ರರಂಗದ ಬದಲಾಗುತ್ತಿದೆ. ಸಿನಿಮಾ ವಿಚಾರದಲ್ಲಿ 35 ಎಮ್‌ಎಮ್‌ನಿಂದ ಹಿಡಿದು 75ಎಮ್‌ಎಮ್‌ವರೆಗೆ ಬಂದಿದೆ. ಹಾಗಿದ್ದ ಸಿನಿಮಾ ಯಾವಾಗ ಟಿವಿ ಹಾಗೂ ಮೊಬೈಲ್‌ಗೆ ಬಂತೋ ಆಗ ಎಲ್ಲಾ ಮನೆಗಳು ಹೋಂ ಥಿಯೇಟರ್ ಆಯಿತು. ಹೀಗಿದ್ದಾಗ ಪ್ರೇಕ್ಷಕ ಏಕೆ ಹೊರಗಡೆ ಹೋಗಬೇಕು? ತನಗೆ ಇಷ್ಟವಾದ ಸಿನಿಮಾವನ್ನು ಮನೆಯಲ್ಲಿಯೇ ಕುಳಿತು ವೀಕ್ಷಿಸುತ್ತೇನೆ ಅಂತಾನೆ. ಪ್ರಸ್ತುತ ಈ ಟ್ರೆಂಡ್ ಹೆಚ್ಚಾಗಿದೆ ಅಂತಾರೆ ಅನುಭವಿತಾರೆ ಸುಂದರ್ ರಾಜ್.

ನಾನು ಕನ್ನಡ ಸಿನಿಮಾ ಇಂಡಸ್ಟ್ರಿಗೆ ಬಂದಾಗ ಚಿತ್ರರಂಗಕ್ಕೆ ನಲವತ್ತು ವರ್ಷ ಆಗಿತ್ತು. ಅದು ಬ್ಲ್ಯಾಕ್ ಅಂಡ್ ವೈಟ್ ಕಾಲ. ಆ ಕಾಲದಲ್ಲಿ ಹಿಂದಿ, ತೆಲುಗು, ತಮಿಳು ಸಿನಿಮಾಗಳು ಕಲರ್‌ನಲ್ಲಿ ಬರುತ್ತಿದ್ದವು. ಆದ್ರೆ ಕನ್ನಡದಲ್ಲಿ ಮಾತ್ರ ಅಲ್ಲೊಂದು ಇಲ್ಲೊಂದು ಅಂತಾ ಕಲರ್ ಸಿನಿಮಾಗಳು ಬರುತ್ತಿತ್ತು. ಅಲ್ಲದೇ ಕನ್ನಡ ಚಿತ್ರರಂಗ ಮದ್ರಾಸ್‌ನಲಿತ್ತು. ನಮ್ಮ ಕನ್ನಡ ಸಿನಿಮಾ ಮಾಡುವವರು ನಾಟಕದ ಹಿನ್ನೆಲೆಯಿಂದ ಬಂದವರು. ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು ಅಂತವರು. ಇನ್ನೂ, ಬ್ರಿಟಿಷ್ ಕಾಲದಲ್ಲಿ ಕಂಟೋನ್‌ಮೆಂಟ್ ಜಾಗದಲ್ಲಿ ಹೆಚ್ಚಾಗಿ ಇಂಗ್ಲಿಷ್ ಸಿನಿಮಾಗಳು ಪ್ರದರ್ಶನ ಆಗುತ್ತಿತ್ತು. ಹೀಗೆ ಸಿನಿಮಾ ಪರಿಚಯ ಆಗಲು, ಪ್ರತಿಯೊಬ್ಬರು ನೋಡಲು ಸಮಯ ಹಿಡಿದಿದೆ ಅಂತಾ ಚಿತ್ರರಂಗದ ಹಿನ್ನೆಲೆ ಬಗ್ಗೆ ನಟ-ಫಿಲ್ಮ್ ಚೇಂಬರ್‌ನ ನಿರ್ಮಾಪಕ ವಲಯದ ಉಪಾಧ್ಯಕ್ಷ ಸುಂದರ್ ರಾಜ್ ವಿವರಿಸಿದರು.

**ಚಿತ್ರಮಂದಿರಗಳಲ್ಲಿ ಸಿನಿಮಾ ನೋಡುವವರ ಸಂಖ್ಯೆ ಕಡಿಮೆ ಆಗಿದ್ದೇಗೆ?:** ಯಾವಾಗ ರೀಲ್ ಯುಗ ಶುರುವಾಯಿತೋ ಅಲ್ಲಿಂದ ಸಿನಿಮಾ ನೋಡುವ ಪ್ರೇಕ್ಷಕರ ಸಂಖ್ಯೆಯೂ ಕಡಿಮೆ ಆಗುತ್ತಾ ಹೋಯಿತು. ಆ ಕಾಲದಲ್ಲಿ ಎವಿಆರ್, ಪ್ರಸಾದ್ ಸ್ಟುಡಿಯೋ, ಜೆಮಿನಿ ಸ್ಟುಡಿಯೋಗಳಿದ್ದವು. ಆದ್ರೆ ಹಣ ಇದ್ದವರು ಸಿನಿಮಾ ಮಾಡುತ್ತಾ ಹೋದರು. ಸರ್ವರಿಗೂ ಸೂಕ್ತ ಅವಕಾಶ ಸಿಗಲಿಲ್ಲ. ಅಲ್ಲದೇ ಮೊದಲೆಲ್ಲಾ ಸಿನಿಮಾ ಅಂದ್ರೆ, ಒಂದು ಸಸ್ಪೆನ್ಸ್ ಇತ್ತು. ಈಗ ಮೇಕಿಂಗ್ ವಿಡಿಯೋ ರಿವೀಲ್, ಪ್ರಮೋಶನಲ್ ಅಂತೆಲ್ಲಾ ಸಿನಿಮಾದ ರಹಸ್ಯ ಗೊತ್ತಾಗುತ್ತಿರುವುದರಿಂದ ಮೊದಲಿದ್ದ ಸಿನಿಮಾ ವೀಕ್ಷಿಸುವ ಆಸಕ್ತಿ, ಸಿನಿಮಾ ಮೇಲಿನ ವ್ಯಾಮೋಹ ಈಗ ಉಳಿದುಕೊಂಡಿಲ್ಲ. ಹೇಗೆ ಸೈಕಲ್ ಯುಗದಿಂದ ಈಗ ಎಲೆಕ್ಟ್ರಾನಿಕ್ ಬಸ್, ಕಾರು ಅಂತೆಲ್ಲಾ ಎವಲ್ಯೂಷನ್ ಆಗಿದೆಯೋ ಚಿತ್ರರಂಗದಲ್ಲೂ ದೊಡ್ಡ ಮಟ್ಟದ ಎವಲ್ಯೂಷನ್ ಆಗಿದ್ದು, ಪ್ರೇಕ್ಷಕರಿಗೆ ಸಾಕಷ್ಟು ಆಯ್ಕೆಗಳಿವೆ. ಹಾಗಾಗಿ, ಪ್ರತೀ ಸಿನಿಮಾಗೂ ಒಂದೇ ಮಟ್ಟದ ಪ್ರೇಕ್ಷಕರ ಸಂಖ್ಯೆ ಇರೋದಿಲ್ಲ ಅಂತಾ ತಿಳಿಸಿದ್ರು.

**ಬರಹಗಾರರ ಸಂಖ್ಯೆ ಕಡಿಮೆ:** ಹಿಂದಿನ ಕಾಲದಲ್ಲಿ ಚಿ. ಉದಯ್ ಶಂಕರ್, ಪುಟ್ಟಣ್ಣ ಕಣಗಾಲ್, ಕುಣಿಗಲ್ ನಾಗಭೂಷಣ್, ಆರ್.ಎನ್.ಜಯಗೋಪಾಲ್ ಅವರು ಚಿತ್ರಕಥೆ ಬರೆಯುತ್ತಿದ್ದರು. ಈಗ ಅಂಥವರ ಸಂಖ್ಯೆ ಕಡಿಮೆ ಆಗಿದೆ ಎಂಬುದನ್ನೂ ಬಹಿರಂಗಪಡಿಸಿದ್ರು.

ಇನ್ನೂ, ಇಂಡಸ್ಟ್ರಿಯಲ್ಲಿ ಯಾರೂ ಮಾತು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಈಗ ದುಡ್ಡು ಇದ್ದವರು ಸಿನಿಮಾ ಮಾಡೋದ್ರಿಂದ ಎಲ್ಲಾ ನಿಯಮಗಳನ್ನು ಅಚ್ಚುಕಟ್ಟಾಗಿ ಅನುಸರಿಸುತ್ತಿಲ್ಲ. ಹಾಗಾಗಿ, ವರ್ಷಕ್ಕೆ ಅಷ್ಟು ಸಿನಿಮಾಗಳು ನಿರ್ಮಾಣ ಆಗುತ್ತಿವೆ. ನಮ್ಮ ಕನ್ನಡ ಚಿತ್ರರಂಗ ಮಾತ್ರವಲ್ಲ, ಎಲ್ಲಾ ಚಿತ್ರರಂಗದ ಪರಿಸ್ಥಿತಿ ಹೀಗೆ ಇದೆ ಎಂಬುದನ್ನು ಒಪ್ಪಿಕೊಂಡರು.

### ಲವ್ ಮಾಕ್ಟೇಲ್ ಖ್ಯಾತಿಯ ನಟ-ನಿರ್ದೇಶಕ-ನಿರ್ಮಾಪಕ ಡಾರ್ಲಿಂಗ್ ಕೃಷ್ಣ ಹೇಳೋದೇನು?

ಸದ್ಯ ಲವ್ ಮಾಕ್ಟೇಲ್ 3 ಸಿನಿಮಾದ ಸಕ್ಸಸ್ ಸಂಭ್ರಮದಲ್ಲಿರುವ ಸ್ಯಾಂಡಲ್‌ವುಡ್‌ನ ಖ್ಯಾತ ನಟ ಡಾರ್ಲಿಂಗ್ ಕೃಷ್ಣ ಮಾತನಾಡಿ, ಅಪ್ಪು ಸರ್ ಕಂಟೆಂಟ್ ಜೊತೆಗೆ ಆ್ಯಕ್ಷನ್ ಸಿನಿಮಾಗಳನ್ನು ಮಾಡುತ್ತಿದ್ರು. ಮಾಸ್ ಹಿಟ್ ಆಗುವ ಜೊತೆಗೆ ಬ್ಯುಸಿನೆಸ್ ದೃಷ್ಟಿಯಿಂದಲೂ ಯಶಸ್ಸು ಕಾಣುತ್ತಿತ್ತು. ಹಾಗೇ ನೋಡುವುದಾದರೆ ಬಾಲಿವುಡ್‌ನ ಹಮ್ ಆಪ್‌ಕೆ ಹೈ ಕೌನ್, ತ್ರಿ ಇಡಿಯಟ್ಸ್, ದಂಗಲ್ ಹೀಗೆ ದೊಡ್ಡ ಮಟ್ಟದಲ್ಲಿ ಚಿತ್ರಗಳು ಹಿಟ್ ಆಗಿವೆ. ಕಂಟೆಂಟ್ ಜೊತೆಗೆ ಕಮರ್ಷಿಯಲಿ ಹಿಟ್ ಎನ್ನಬಹುದು ಎಂದು ತಿಳಿಸಿದರು.

**ನಟ ಡಾರ್ಲಿಂಗ್ ಕೃಷ್ಣ:** ಪ್ರತೀ ವಿಭಾಗದಲ್ಲಿ ಎಚ್ಚರ ವಹಿಸಿ ಸಿನಿಮಾ ಮಾಡಬೇಕು: ಕನ್ನಡದಲ್ಲಿ ವರ್ಷಕ್ಕೆ 250ಕ್ಕೂ ಹೆಚ್ಚು ಚಿತ್ರಗಳು ಬಿಡುಗಡೆ ಆದ್ರೂ ಸಕ್ಸಸ್ ರೇಟ್ ಕಡಿಮೆ ಇದೆ, ನಿಮ್ಮ ಪ್ರಕಾರ ಕಾರಣ ಏನಿರಬಹುದು? ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿ, ಒಂದು ಸಿನಿಮಾಗೆ ಬೇಕಾದ ಕಂಟೆಂಟ್, ಸ್ಕ್ರೀನ್ ಪ್ಲೇ ಹೀಗೆ ಚಿತ್ರದ ಪ್ರತಿಯೊಂದು ಭಾಗದಲ್ಲಿ ಎಚ್ಚರ ವಹಿಸಿ ಸಿನಿಮಾ ಮಾಡಿದಾಗ ಖಂಡಿತವಾಗಿ ಪ್ರೇಕ್ಷಕರು ಕೈ ಹಿಡಿಯುತ್ತಾರೆ. ಅದು ಯಾವುದೇ ಸಮಯ ಆದ್ರೂ, ಯಾರದ್ದೇ ಸಿನಿಮಾ ಆದ್ರೂ ಪರವಾಗಿಲ್ಲ. ಕಂಟೆಂಟ್ ಚೆನ್ನಾಗಿ ಇರಬೇಕು ಅಂತಾರೆ ಲವ್ ಮಾಕ್ಟೇಲ್ ಸಾರಥಿ.

**ಆಡಿಯನ್ಸ್ ಬಹಳ ಚ್ಯೂಸಿ:** ಮೊದಲು ಒಂದು ಅವರೇಜ್ ಸಿನಿಮಾ ಒಂದು ಮಟ್ಟಿಗೆ ಓಡುತ್ತಿತ್ತು. ಆದ್ರೆ ಇಂದು ಪರಿಸ್ಥಿತಿ ಹಾಗಿಲ್ಲ. ಆಡಿಯನ್ಸ್ ಬಹಳ ಚ್ಯೂಸಿ ಆಗಿದ್ದಾರೆ. ಗುಡ್ ಫಿಲ್ಮ್ ನಾಟ್ ವರ್ಕ್. ವೆರಿ ಗುಡ್ ಫಿಲ್ಮ್ ವರ್ಕ್ ಆಗುತ್ತೆ ಅಂತಾರೆ ಕೃಷ್ಣ.

**2025ರಲ್ಲಿ ಯಶಸ್ಸು ಕಂಡ 45 ಚಿತ್ರದ ತಂಡ**

**ಎಂಟರ್‌ಟೈನ್ಮೆಂಟ್ ಅನ್ನೋದು ಎಲ್ಲಾ ಕಡೆಗಳಲ್ಲಿಯೂ ಸಿಗುತ್ತಿದೆ:** ಮೊದಲು ಎಂಟರ್‌ಟೈನ್ಮೆಂಟ್ ಅಂದ್ರೆ, ಸಿನಿಮಾ ಒಂದೇ ಇತ್ತು. ಆಗ ಸಿನಿಮಾ ಚೆನ್ನಾಗಿರಲಿ, ಚೆನ್ನಾಗಿಲ್ಲ ಅಂದ್ರೂ, ಒಂದು ಬಾರಿ ಹೋಗಿ ನೋಡೋರು. ಆದ್ರೀಗ ಎಂಟರ್‌ಟೈನ್ಮೆಂಟ್ ಅನ್ನೋದು ಎಲ್ಲಾ ಕಡೆಗಳಲ್ಲಿಯೂ ಸಿಗುತ್ತದೆ. ಜೊತೆಗೆ, ಒಂದು ಸಿನಿಮಾ ಚೆನ್ನಾಗಿದೆ ಅಂದ್ರೆ, ಉತ್ತಮ ಕಲೆಕ್ಷನ್ ಆಗುತ್ತಿತ್ತು. ಈಗ ಚೆನ್ನಾಗಿರುವ ಸಿನಿಮಾವನ್ನೇ ಓಕೆ ಓಕೆ ಅಂತಾರೆ. ಓಕೆ ಓಕೆ ಸಿನಿಮಾ ಹಾಗೂ ಚೆನ್ನಾಗಿದೆ ಎನ್ನುವ ಸಿನಿಮಾಗಳು ಈಗ ಕಲೆಕ್ಷನ್ ಮಾಡೋದಿಲ್ಲ. ಅದಕ್ಕೆ ತುಂಬಾ ಚೆನ್ನಾಗಿರಬೇಕು ಅಥವಾ ಅದ್ಭುತವಾಗಿರಬೇಕು ಅಂತಾರೆ ಡಾರ್ಲಿಂಗ್ ಕೃಷ್ಣ.




### ಸಿನಿಮಾ ಪ್ರದರ್ಶಕರ ವಲಯದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್ ಹೇಳೋದೇನು?

ಸ್ಯಾಂಡಲ್‌ವುಡ್ ಸಿನಿಮಾ ಸಕ್ಸಸ್ ಹಾಗೂ ಫೈಲ್ಯೂರ್ ಬಗ್ಗೆ ಸಿನಿಮಾ ಪ್ರದರ್ಶಕರ ವಲಯದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್ ಮಾತನಾಡಿ, ಸಿನಿಮಾ ಸೋಲು ಗೆಲುವು ಮೊದಲಿನಿಂದಲೂ ಇದೆ. ಈಗಾಗಲೇ ನೋಡಿರುವ ಕಥೆ ಹಾಗೂ ಸೀನ್‌ಗಳು ಬಂದ್ರೆ ಅಥವಾ ಒಂದೇ ತರ ಇದ್ರೆ ಅದನ್ನು ಪ್ರೇಕ್ಷಕರು ಒಪ್ಪಿಕೊಳ್ಳೋದಿಲ್ಲ. ಆ ಕಾಲದಲ್ಲಿ ಒಂದು ಸಿನಿಮಾದ ಕಥೆಯನ್ನು ಅಳೆದು ತೂಗಿ ಮಾಡುತ್ತಿದ್ರು. ಆದ್ರೆ ಪ್ರಸ್ತುತ ಒಂದು ಹಿನ್ನೆಲೆ ಇರುವ ಕಥೆಯನ್ನು ಸರಿಯಾಗಿ ರಿಸರ್ಚ್ ಮಾಡದೇ, ಪರಿಪೂರ್ಣವಾಗಿ ಹೇಳದೇ ಇದ್ದಾಗ ಸಿನಿಮಾ ಸೋಲಿಗೆ ಕಾರಣವಾಗುತ್ತದೆ ಎಂದು ತಿಳಿಸಿದರು.

**ಸಿನಿಮಾ ಪ್ರದರ್ಶಕರ ವಲಯದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್**

**ಸ್ಟಾರ್ ನಟ ಎನಿಸಿಕೊಂಡವರು 3-4 ವರ್ಷಕ್ಕೆ 1 ಸಿನಿಮಾ ಮಾಡ್ತಾರೆ:** ಮತ್ತೊಂದು ಕಾರಣ – ಸ್ಟಾರ್ ನಟರು ಸಿನಿಮಾ ಮಾಡದೇ ಇದ್ದಾಗ ಹೊಸಬರು ಹಾಗೂ ಉದ್ಯಮದ ಮೇಲೆ ಪ್ರಭಾವ ಬೀರುತ್ತದೆ. ಅಣ್ಣಾವ್ರು, ವಿಷ್ಣು ಸರ್ ಕಾಲದಲ್ಲಿ ವರ್ಷಕ್ಕೆ ಒಂದು ಅಥವಾ ಎರಡು ಸಿನಿಮಾಗಳು ಬಿಡುಗಡೆ ಆಗುತ್ತಿದ್ದವು. ಆಗ ಪ್ರೇಕ್ಷಕರು ಚಿತ್ರಮಂದಿರಗಳಲ್ಲಿ ಮುಗಿಬಿದ್ದು ಸಿನಿಮಾ ನೋಡ್ತಾ ಇದ್ರು. ಆದ್ರೆ ಸದ್ಯ ಸ್ಟಾರ್ ನಟರು ಅನ್ನಿಸಿಕೊಂಡಿರುವವರು 3-4 ವರ್ಷಕ್ಕೆ ಒಂದು ಸಿನಿಮಾ ಮಾಡಿದಾಗ ಅವರ ಅಭಿಮಾನಿಗಳೇ ಸಿನಿಮಾ ನೋಡುವ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ಸದ್ಯದ ಚಿತ್ರರಂಗದ ಪರಿಸ್ಥಿತಿಗೆ ಅದೂ ಒಂದು ಕಾರಣ ಅಂತಾರೆ ಕೆ.ವಿ.ಚಂದ್ರಶೇಖರ್.

**ಪ್ರೇಕ್ಷಕರು ಬದಲಾಗಿದ್ದಾರೆ, ಆದ್ರೆ ಚಿತ್ರರಂಗ ಬದಲಾಗಿಲ್ವೇ?:** ಈ ಮಾತು ಒಂದರ್ಥದಲ್ಲಿ ಸರಿ ಇರಬಹುದು. ಆದ್ರೆ ಪ್ರೇಕ್ಷಕರು ಯಾವತ್ತಿಗೂ ಬದಲಾಗಿಲ್ಲ. ಈ ಹಿಂದೆ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡುತ್ತಿದ್ರು, ಇವತ್ತಿಗೂ ವೀಕ್ಷಿಸುತ್ತಾ ಚಿತ್ರರಂಗವನ್ನು ಬೆಂಬಲಿಸುತ್ತಿದ್ದಾರೆ. ಆದರೆ 2 ಕಾರಣಗಳನ್ನು ಬಯಸುತ್ತಾರೆ. ಒಂದು ಚಿತ್ರದ ಕಂಟೆಂಟ್ ಇಷ್ಟ ಆಗಬೇಕು, ಮತ್ತೊಂದು ಆ ನಟನ ಸಿನಿಮಾ ಬರಬೇಕು ಅನ್ನೋದು. ಆದ್ರೆ, ಸ್ಟಾರ್ ನಟರ ಸಿನಿಮಾಗಳು ಬರುತ್ತಿಲ್ಲ ಅನ್ನೋದು ಉದ್ಯಮದ ತಪ್ಪೇ ಹೊರತು ಪ್ರೇಕ್ಷಕರದ್ದಲ್ಲ. ಪ್ರೇಕ್ಷಕರು ಒಳ್ಳೆ ಕಂಟೆಂಟ್‌ಗಳನ್ನು ನಿರೀಕ್ಷಿಸುತ್ತಿದ್ದಾರೆ. ಆದ್ರೆ ಉದ್ಯಮದವರು ಒಳ್ಳೆ ಕಂಟೆಂಟ್ ಕೊಡೋದ್ರಲ್ಲಿ ಹಿಂದೆ ಬಿದ್ದಿದ್ದಾರೆ ಎಂಬುದನ್ನು ಕೆ.ವಿ.ಚಂದ್ರಶೇಖರ್ ಬಹಿರಂಗಪಡಿಸಿದರು.

**100 ಕೋಟಿ ರೂ. ಬಜೆಟ್‌ನಲ್ಲಿ ನಿರ್ಮಾಣ ಮಾಡುತ್ತಾರೆ, ನಿರ್ಮಾಪಕರದ್ದೇ ತಪ್ಪು:** ನೀವು ಮಾಜಿ ಫಿಲ್ಮ್ ಚೇಂಬರ್ ಅಧ್ಯಕ್ಷರಾಗಿ ಸದ್ಯದ ಕನ್ನಡ ಚಿತ್ರರಂಗದ ಪರಿಸ್ಥಿತಿ ಹೇಗಿದೆ ಅನಿಸುತ್ತದೆ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸದ್ಯದ ಮಟ್ಟಿಗೆ ಕನ್ನಡ ಚಿತ್ರರಂಗ ಚೆನ್ನಾಗಿದೆ.

ನಮ್ಮ ಕರ್ನಾಟಕದಲ್ಲಿ ಎಷ್ಟು





ಚಿತ್ರಮಂದಿರಗಳು ಇವೆ. ಆ ಎಲ್ಲಾ ಚಿತ್ರಮಂದಿರಗಳಲ್ಲಿ ಒಂದು ಸಿನಿಮಾ ಎಷ್ಟು ಶೋ ಹೊಂದಿರುತ್ತದೆ? ಎಷ್ಟು ಪ್ರೇಕ್ಷಕರು ಸಿನಿಮಾ ನೋಡ್ತಾರೆ? ಅನ್ನೋ ಅಂಕಿ-ಅಂಶ ಎಲ್ಲರಿಗೂ ಗೊತ್ತೇ ಇದೆ. ಶೇ.80ರಷ್ಟು ಕಲೆಕ್ಷನ್ ಆದಾಗ ಆ ಸಿನಿಮಾ ನಿರ್ಮಾಪಕನಿಗೆ ಲಾಭಾನೆ. ಆದ್ರೆ ಈಗ ಏನಾಗಿದೆ ಅಂದ್ರೆ – ಒಬ್ಬ ಸ್ಟಾರ್ ನಟನ ಸಿನಿಮಾ ಅಂದಾಗ 100 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಿರ್ಮಾಣ ಮಾಡುತ್ತಾರೆ. ಅದು ನಿರ್ಮಾಪಕ ಹಾಗೂ ಚಿತ್ರತಂಡದ ತಪ್ಪು. ಏಕೆಂದರೆ ಕರ್ನಾಟಕದಲ್ಲಿ ಒಬ್ಬ ಸ್ಟಾರ್ ನಟರ ಸಿನಿಮಾ ಸೂಪರ್ ಹಿಟ್ ಅಂದಾಗ ಒಂದು ವಾರಕ್ಕೆ 35 ರಿಂದ 50 ಕೋಟಿ ರೂಪಾಯಿ ಕಲೆಕ್ಷನ್ ಮಾಡುತ್ತವೆ. ಹೀಗಿರಬೇಕಾದ್ರೆ, ನಿರ್ಮಾಪಕರು 30 ಕೋಟಿ ಅಥವಾ 35 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಿರ್ಮಾಣ ಮಾಡಬೇಕು. ಅದನ್ನು ಬಿಟ್ಟು ಅತಿ ಹೆಚ್ಚು ದುಡ್ಡು ಹಾಕಿದ್ರೆ, ಅದು ನಿರ್ಮಾಪಕನದ್ದೇ ತಪ್ಪು ಅಂತಾರೆ ಕೆ.ವಿ.ಚಂದ್ರಶೇಖರ್.

### ನಟ ರಾಜೇಶ್ ಧ್ರುವ ಹೇಳೋದೇನು?

ಇತ್ತೀಚೆಗಷ್ಟೇ ಈಟಿವಿ ಭಾರತದೊಂದಿಗಿನ ಸಂದರ್ಶನದಲ್ಲಿ ಭಾಗಿಯಾಗಿದ್ದ ನಟ ರಾಜೇಶ್ ಧ್ರುವ ಪ್ರಕಾರ, ಕಂಟೆಂಟ್ ಸಿನಿಮಾಗಳು ಹೆಚ್ಚಾಗಿ ಬರುತ್ತಿಲ್ಲ. ಪ್ರೇಕ್ಷಕರು ಇಷ್ಟಪಡುವ ಸಿನಿಮಾಗಳನ್ನು ಮಾಡಲಾಗುತ್ತಿಲ್ಲ. ಪ್ರೇಕ್ಷಕರ ನಾಡಿಮಿಡಿತ ಅರ್ಥ ಮಾಡಿಕೊಳ್ಳದೇ ವ್ಯಾಪಾರ ದೃಷ್ಟಿಯಿಂದ ಹೆಚ್ಚಿನವರು ಸಿನಿಮಾಗಳನ್ನು ಮಾಡುತ್ತಿದ್ದಾರೆ. ನಾನು ಚಿಕ್ಕವನಾಗಿ ಈ ಮಾತು ಹೇಳುವುದು ಎಷ್ಟು ಸರಿ ಎಂಬುದು ನನಗೆ ಗೊತ್ತಿಲ್ಲ. ಆದ್ರೆ ಓರ್ವ ಪ್ರೇಕ್ಷಕನಾಗಿ ಹೇಳುವ ಅಧಿಕಾರವಿದೆ. ಆ ನಿಟ್ಟಿನಲ್ಲಿ ನಟರು, ನಿರ್ದೇಶಕರು, ನಿರ್ಮಾಣ ಸಂಸ್ಥೆಗಳು ಜನರ ನಾಡಿಮಿಡಿತ ಅರ್ಥಮಾಡಿಕೊಂಡು ಅವರಿಗೆ ಇಷ್ಟ ಆಗುವ ರೀತಿಯ ಸಿನಿಮಾ ಮಾಡಿದ್ರೆ, ಚಿತ್ರರಂಗ ಬೆಳವಣಿಗೆ ಕಾಣುತ್ತದೆ. ಫ್ರೆಶ್ ಸ್ಟೋರಿ (ಪೀಟರ್ ಸಿನಿಮಾ) ಮೂಲಕ ಸಂದೇಶ ನೀಡುವ ಪ್ರಯತ್ನ ಮಾಡಿದ್ದೇವೆ. ಈ ರೀತಿಯ ಕಂಟೆಂಟ್ ಸಿನಿಮಾ ಈಗ ಚಿತ್ರರಂಗಕ್ಕೆ ಬೇಕಾಗಿತ್ತು. ಒಂದು ಚಿತ್ರ ಯಶಸ್ವಿಯಾದರೆ ನನ್ನಂತಹ ಅದೆಷ್ಟೋ ಕಲಾವಿದರು ಬೆಳೆಯುತ್ತಾರೆ ಎಂದು ತಿಳಿಸಿದ್ದರು. ಕೋರಿಯೋಗ್ರಾಫರ್ ಆಗಿ ಚಿತ್ರರಂಗ ಪ್ರವೇಶಿಸಿದ ನಟ ರಾಜೇಶ್ ಧ್ರುವ ಕಿರುತೆರೆಯಲ್ಲಿ ಪ್ರಖ್ಯಾತಿ ಪಡೆದು ಈಗ ಹಿರಿತೆರೆಯಲ್ಲೂ ಗುರುತಿಸಿಕೊಂಡಿದ್ದು, ಕಂಟೆಂಟ್ ಮುಖ್ಯ ಅನ್ನೋದನ್ನು ಒತ್ತಿ ಹೇಳಿದ್ದಾರೆ.

**2025ರಲ್ಲಿ ಯಶಸ್ಸು ಕಂಡ ಕಾಂತಾರ ಚಾಪ್ಟರ್ 1 ಚಿತ್ರದ ತಂಡ**

**ಹೆಚ್ಚು ಸಿನಿಮಾಗಳು ಪ್ರೇಕ್ಷಕರನ್ನು ತಲುಪದಿರಲು ಕಾರಣವೇನು?:** 255 ಸಿನಿಮಾಗಳು ಬಿಡುಗಡೆ ಆದ್ರೂ, ಅನೇಕ ಚಲನಚಿತ್ರಗಳು ಆತುರ ಮಾಡಿವೆ ಮತ್ತು ಕಥೆ/ಮೇಕಿಂಗ್‌ನಲ್ಲಿ ಅಭಿವೃದ್ಧಿಯಿಲ್ಲದಿರುವಂತೆ ಭಾಸವಾಯಿತು.

ಚಲನಚಿತ್ರ ನಿರ್ಮಾಪಕರು ಇನ್ನೂ ಹೆಚ್ಚಾಗಿ ಹಳೆಯ ಸೂತ್ರಗಳನ್ನು ಅವಲಂಬಿಸಿದ್ದಾರೆ. ಆದ್ರೆ, ಪ್ರೇಕ್ಷಕರು ಸ್ವಂತಿಕೆ ಮತ್ತು ಸಿನಿಮೀಯ ಕರಕುಶಲತೆಯನ್ನು ಬಯಸುತ್ತಿದ್ದಾರೆ. ಹೆಚ್ಚು ಚ್ಯೂಸಿ ಆಗಿದ್ದಾರೆ

ವೀಕ್ಷಕರು ಕನ್ನಡ ಸಿನಿಮಾಗಳನ್ನು ಕೊರಿಯನ್ ಥ್ರಿಲ್ಲರ್‌ಗಳು, ಹಾಲಿವುಡ್ ಬ್ಲಾಕ್‌ಬಸ್ಟರ್‌ಗಳು ಮತ್ತು ಭಾರತದ ಬಹುಭಾಷೆಗಳ ಸಿನಿಮಾಗಳೊಂದಿಗೆ ಹೋಲಿಸುತ್ತಾರೆ. ಆಗ ಸಹಜವಾಗಿ ಬೇಡಿಕೆ, ನಿರೀಕ್ಷೆಗಳು ಹೆಚ್ಚಾಗುತ್ತವೆ.

ನಮ್ಮ ಮಣ್ಣಲ್ಲಿ ಬೇರೂರಿರುವ ಕಥೆಯು ಪ್ರತಿಧ್ವನಿಸುತ್ತದೆ ಎಂಬುದನ್ನು ಸಾಬೀತುಪಡಿಸಿದವು. ಕಂಟೆಂಟ್ ಸಿನಿಮಾಗಳನ್ನು ಪ್ರೇಕ್ಷಕರು ಕೈಬಿಡೋದಿಲ್ಲ ಎಂಬುದನ್ನು ಸಾಬೀತುಪಡಿಸಿದವು.

ಕಥೆ ಮತ್ತು ಪ್ರಸ್ತುತಪಡಿಸುವ ಶೈಲಿ ಹೊಸತನದಿಂದ ಕೂಡಿದ್ದರೆ ಸಿನಿಮಾ ಗೆಲ್ಲುತ್ತದೆ ಎಂಬುದನ್ನು ಹಲವು ಚಿತ್ರಗಳು ಸಾಬೀತುಪಡಿಸಿದವು.

ಸಣ್ಣ ಸಿನಿಮಾಗಳು ವಾಣಿಜ್ಯಕವಾಗಿ ಯಶಸ್ವಿಯಾಗದಿದ್ದರೂ ಪ್ರಶಂಸೆಯನ್ನು ಗಳಿಸಿದವು.

ಪ್ರೇಕ್ಷಕನೇ ಕಿಂಗ್ ಎಂಬುದನ್ನು ಸು ಫ್ರಮ್ ಸೋ ಸಾಬೀತುಪಡಿಸಿತು.

ಸೂಪರ್ ಸ್ಟಾರ್‌ಗಳ ಸಿನಿಮಾಗಳು ಬೇಕೆ ಬೇಕು ಎಂಬುದನ್ನು ಪ್ರೇಕ್ಷಕರು ಮತ್ತೊಮ್ಮೆ ಕೂಗಿ ಹೇಳಿದರು. ಅದರಂತೆ ಬಂದ ಮಾರ್ಕ್, 45, ದಿ ಡೆವಿಲ್ ಕೂಡಾ ಸೂಪರ್ ಹಿಟ್ ಆಯಿತು.

# ದೂದ್ ಪೇಡ ದಿಗಂತ್ ಸಿನಿಮಾಗೆ ನಟಿ ಸಮಂತಾ ಸಾಥ್!

ದೂದ್ ಪೇಡ ದಿಂಗತ್ ಮತ್ತೊಂದು ಚಿತ್ರ ಮಾಡುತ್ತಿದ್ದಾರೆ. ಇದರ ಟೈಟಲ್ ವೈಬ್ರಂಟ್ ಆಗಿದೆ. ಕೇಳಿದಾಕ್ಷಣ ಗಮನ ಸೆಳೆಯುತ್ತದೆ. ಇದನ್ನ ನಟಿ ಸಮಂತಾ ರಿಲೀಸ್ ಮಾಡಿದ್ದಾರೆ. ಗುಡ್ ಲಕ್ ಅಂತ ಇಡೀ ಟೀಮ್‌ಗೆ ಹೇಳಿದ್ದಾರೆ. ಈ ಒಂದು ಸಿನಿಮಾದ ಚಿತ್ರೀಕರಣ ಇನ್ನು ಶುರು ಆಗಿಲ್ಲ. ಆದರೆ, ಸಿನಿಮಾ ಮಾಹಿತಿ ಈಗ ಹೊರ ಬಂದಿದೆ.

**ರುದ್ರ, ಕಾಲ ಸಿನಿಮಾ:** ದಿಗಂತ್ ಮಂಚಾಲೆ ಒಪ್ಪಿರೋ ಚಿತ್ರಕ್ಕೆ ಈ ಟೈಟಲ್ ಇಟ್ಟಿದ್ದಾರೆ. ರುದ್ರ ಕಾಲ ಅನ್ನುವ ಈ ಚಿತ್ರದ ಟೈಟಲ್ ಈಗ ರಿವೀಲ್ ಆಗಿದೆ. ಒಂದು ಪೋಸ್ಟರ್ ಕೂಡ ಹೊರ ಬಂದಿದೆ.


**ಸಮಂತಾ ಜತೆಗೆ ದಿಗಂತ್ ಸಿನಿಮಾ:** ಚಿತ್ರದ ಈ ಒಂದು ಟೈಟಲ್ ಅನ್ನ ನಟಿ ಸಮಂತಾ ರುತ್ ಪ್ರಭು ರಿಲೀಸ್ ಮಾಡಿದ್ದಾರೆ. ಇಡೀ ತಂಡಕ್ಕೆ ಗುಡ್ ಲಕ್ ಹೇಳಿದ್ದಾರೆ. ಈ ಸಮಯದಲ್ಲಿ ದಿಗಂತ್ ಕೂಡ ಇದ್ದರು.

ನಮ್ಮ ಚಿತ್ರದ ಟೈಟಲ್ ಅನ್ನ ಸಮಂತಾ ಅವರು ರಿವೀಲ್ ಮಾಡಿದ್ದಾರೆ. ಇದು ತುಂಬಾನೆ ಖುಷಿಕೊಡುತ್ತದೆ. ಡೈರೆಕ್ಟರ್ ಗೋಪಿ ಈ ಚಿತ್ರದ ಕಥೆ ಬಂದು ಹೇಳಿದರು. ಕಥೆ ಕೇಳಿ ತುಂಬಾನೆ ಇಷ್ಟವಾಯಿತು. ಇದನ್ನ ನಾನು ಮಾಡಲು ಒಪ್ಪಿಕೊಂಡಿದ್ದೇನೆ ಅಂತಲೇ ದಿಗಂತ್ ಹೇಳಿಕೊಂಡಿದ್ದಾರೆ.

ಈ ಚಿತ್ರದ ಡೈರೆಕ್ಟರ್ ಹಾಗೂ ನಿರ್ಮಾಪಕರಿಗೆ ಒಳ್ಳೆಯದಾಗಲಿ ಅಂತಲೂ ದಿಗಂತ್ ಶುಭ ಹಾರೈಸಿದ್ದಾರೆ.

## ಟೈಟಲ್ ಅನಾವರಣ ಮಾಡಿ ಸ್ಯಾಮ್ ಹೇಳಿದ್ದೇನು?

ಈ ಚಿತ್ರದ ಚಿತ್ರೀಕರಣ ಇನ್ನು ಶುರು ಆಗಿಲ್ಲ. ಆದರೆ, ಇದೇ ತಿಂಗಳು ಏಪ್ರಿಲ್-22 ರಂದು ಚಿತ್ರದ ಮುಹೂರ್ತ ಮಾಡುವ ಪ್ಲಾನ್ ಅನ್ನ ಸಿನಿಮಾ ತಂಡ ಹಾಕಿಕೊಂಡಿದೆ.



ದಿಗಂತ್ ಅವರ ಈ ಒಂದು ರುದ್ರ ಕಾಲ ಚಿತ್ರವನ್ನ ಎರಡು ಭಾಷೆಯಲ್ಲಿಯೇ ತೆಗೆಯಲಾಗುತ್ತಿದೆ. ಕನ್ನಡ ಹಾಗೂ ತೆಲುಗು ಭಾಷೆಯಲ್ಲಿಯೇ ಈ ಸಿನಿಮಾ ಬರ್ತಿದೆ.


**ಎರಡು ಭಾಷೆಯಲ್ಲಿ ಚಿತ್ರೀಕರಣ:** ಈ ಚಿತ್ರಕ್ಕೆ ರಮೇಶ್ ಅವರು ಕಥೆ ಬರೆದಿದ್ದಾರೆ. ಕ್ರಿಸ್ಟೋಫರ್ ಜೋಸೆಫ್ ಕ್ಯಾಮರಾವರ್ಕ್ ಮಾಡಿದ್ದಾರೆ. ಡೈರೆಕ್ಟರ್ ಗೋಪಿ ಅವರಿಗೆ ಇದು ನಾಲ್ಕನೆ ಚಿತ್ರವೇ ಆಗಿದೆ. ಈ ಹಿಂದೆ ಮೂರು ಸಿನಿಮಾಗಳನ್ನ ಮಾಡಿದ್ದಾರೆ.

**ಸಮಂತಾ ಜತೆಗೆ ದಿಗಂತ್ ಸಿನಿಮಾ:** ದಿಗಂತ್ ಟಾಲಿವುಡ್‌ಗೂ ಕಾಲಿಟ್ಟಿದ್ದಾರೆ. ಇಲ್ಲಿ ಮಾ ಅಂತಿ ಬಂಗಾರಮ್ಮ ಚಿತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರದಲ್ಲಿ ನಟಿ ಸಮಂತಾ ಅವರಿಗೆ ಜೋಡಿ ಆಗಿದ್ದಾರೆ.

ಈ ಚಿತ್ರದಲ್ಲಿ ಸಮಂತಾ ಸಖತ್ ಆಗಿಯೆ ಆ್ಯಕ್ಟ್ ಮಾಡಿದ್ದಾರೆ. ಚಿತ್ರದ ಟೀಸರ್ ಒಂದು ಅತಿ ಹೆಚ್ಚು ಗಮನ ಸೆಳೆದಿದೆ. ಆ್ಯಕ್ಷನ್ ಡ್ರಾಮಾ ಕಂಟೆಂಟ್‌ನ ಈ ಚಿತ್ರ ಮೇ-15 ರಂದು ರಿಲೀಸ್ ಆಗುತ್ತಿದೆ.

**ಉತ್ತರಕಾಂಡ ಸಿನಿಮಾ ಏನ್ ಆಯಿತು:** ರಮೇಶ್ ಅರವಿಂದ್ ಅವರು ಅಭಿನಯಿಸಿರೋ ದೈಜಿ ಚಿತ್ರದಲ್ಲೂ ದಿಗಂತ್ ಅಭಿನಿಯಿಸಿದ್ದಾರೆ. ಡಾಲಿ ಧನಂಜಯ್ ಅವರ ಉತ್ತರಕಾಂಡ ಚಿತ್ರದಲ್ಲೂ ದಿಗಂತ್ ಇದ್ದಾರೆ.

ಆದರೆ, ಈ ಚಿತ್ರದ ಚಿತ್ರೀಕರಣ ಅರ್ಧ ಮಾತ್ರ ಆಗಿದೆ. ಇದು ಮತ್ತೆ ಶುರು ಆಗುತ್ತದೆ ಅನ್ನೋದನ್ನ ಡೈರೆಕ್ಟರ್ ರೋಹಿತ್ ಪದಕಿ ಹೇಳಿಕೊಂಡಿದ್ದಾರೆ ಅಂತ ಹೇಳಬಹುದು.




# ಭಗ್ನಪ್ರೇಮ, ತನಿಖೆ, ಗೊಂದಲ ಮತ್ತು ಕುತೂಹಲದ ನಡುವೆ ಕಥೆ

ಆತ ಪ್ರೇಕ್ಷಕನಿಗೆ ಎದುರಾಗುವುದು ಮೂರು ಹೊತ್ತೂ ಕುಡಿದು ತೂರಾಡುವ ಭಗ್ನಪ್ರೇಮಿಯಾಗಿ. ಇಂಥಾ ಅವಸ್ಥೆಯಲ್ಲಿ ನಾಯಕನ ಗ್ರಹಗತಿಗಳೆಲ್ಲ ಉಲ್ಟಾ ಹೊಡೆದು ಇಡೀ ಪರಿಸ್ಥಿತಿ ಆತನ ವಿರುದ್ಧ ತಿರುಗುತ್ತ ಹೋಗುತ್ತದೆ.

ಈ ಸಿನಿಮಾದ ಒಂದು ಸನ್ನಿವೇಶದಲ್ಲಿ ಸುಚೇಂದ್ರ ಪ್ರಸಾದ್ ನಿರ್ವಹಿಸಿದ ಪಾತ್ರವೊಂದಿದೆ. ಕ್ಷಣಕ್ಕೊಮ್ಮೆ ಬೋರ್ನ್‌ವೀಟಾ ಕುಡಿಯುತ್ತಾ, ಕನ್ಫ್ಯೂಷನ್, ಗಡಿಬಿಡಿ, ಆತಂಕದಲ್ಲಿ ಇತರ ಪಾತ್ರಗಳನ್ನು, ಪ್ರೇಕ್ಷಕನನ್ನು ವಿಹ್ವಲಗೊಳ್ಳುವಂತೆ ಮಾಡುತ್ತದೆ. ಕೊನೆಗೂ ಆ ಪಾತ್ರ ಯಾಕೆ ಬಂತು ಅನ್ನೋದು ಯಾರಿಗೂ ಗೊತ್ತಾಗಲ್ಲ. ಸಿನಿಮಾದ ಚಿತ್ರಕಥೆಯೂ ಪ್ರೇಕ್ಷಕನ ಮೇಲೆ ಇಂಥಾದ್ದೊಂದು ಪರಿಣಾಮ ಬೀರುತ್ತದೆ. ಈ ಸಿನಿಮಾದ ನಾಯಕ ಆಕಾಶ್ ಒಬ್ಬ ಜನಾನುರಾಗಿ ವೈದ್ಯ.

ಆತ ಪ್ರೇಕ್ಷಕನಿಗೆ ಎದುರಾಗುವುದು ಮೂರು ಹೊತ್ತೂ ಕುಡಿದು ತೂರಾಡುವ ಭಗ್ನಪ್ರೇಮಿಯಾಗಿ. ಇಂಥಾ ಅವಸ್ಥೆಯಲ್ಲಿ ನಾಯಕನ ಗ್ರಹಗತಿಗಳೆಲ್ಲ ಉಲ್ಟಾ ಹೊಡೆದು ಇಡೀ ಪರಿಸ್ಥಿತಿ ಆತನ ವಿರುದ್ಧ ತಿರುಗುತ್ತ ಹೋಗುತ್ತದೆ. ನಾಯಕನಿಗೆ ಕುಡಿತವೇ ಪರ್ಮನೆಂಟ್ ಆಗುತ್ತದೆ. ಇನ್ನೊಂದೆಡೆ ವಿಲಕ್ಷಣ ಪೊಲೀಸ್ ಅಧಿಕಾರಿ ಯುವರಾಜ್ ಒಂಟಿಮನಿ ಇದ್ದಾರೆ. ಕುಹಕ, ನಗು, ಗಾಂಭೀರ್ಯ ಅವರ ವ್ಯಕ್ತಿತ್ವದ ಟ್ರಂಪ್ ಕಾರ್ಡ್. ರಮೇಶ್ ಇಂದಿರಾ ಅವರನ್ನು ಈ ಪಾತ್ರದಲ್ಲಿ ನೋಡುವುದೇ ಮಜಾ.

**ಚಿತ್ರ : ಕ್ಯಾಲೆಂಡರ್**

**ನಿರ್ದೇಶನ : ನವೀನ್ ಶಕ್ತಿ**

**ತಾರಾಗಣ: ಆದರ್ಶ ಗುಂಡುರಾಜ್, ರಮೇಶ್ ಇಂದಿರಾ, ಸುಶ್ಮಿತಾ ನಾಯಕ್, ನಿವಿಷ್ಕಾ ಪಾಟೀಲ್**

ಒಂದು ಕಡೆ ಇನ್ವೆಸ್ಟಿಗೇಶನ್, ಇನ್ನೊಂದೆಡೆ ತಲೆ ತಲೆ ಜಜ್ಜಿಕೊಂಡರೂ ಅರ್ಥವಾಗದ ನಾಯಕನ ನಡೆ ಇವೆಲ್ಲವೂ ಪ್ರೇಕ್ಷಕನನ್ನು ಭೀತಗೊಳಿಸುತ್ತದೆ. ವೈದ್ಯನೂ ಆಗಿರುವ ನಾಯಕ ಕ್ಲೈಮ್ಯಾಕ್ಸ್‌ನಲ್ಲಿ ಪ್ರೇಕ್ಷಕನನ್ನು ರಿಲ್ಯಾಕ್ಸ್ ಮಾಡುತ್ತಾನೆ. ಶೇ.70ರಷ್ಟು ಹೆಣ್ಣುಮಕ್ಕಳನ್ನು ಕಾಡುವ ಸೂಕ್ಷ್ಮ ಸಮಸ್ಯೆಯೊಂದನ್ನು ಬೆಳಕಿಗೆ ತಂದು ಆರಂಭದಿಂದ ಅಲ್ಲಿಯವರೆಗೂ ಕ್ರಿಯೇಟ್ ಆದ ಟೆನ್ಶನ್‌ಗೆ ಮುಕ್ತಿ ನೀಡುತ್ತಾನೆ. ಸಿನಿಮಾ ಕಥೆಯಾಗಿ ಎಷ್ಟು ನಿಲ್ಲುತ್ತದೋ ಗೊತ್ತಿಲ್ಲ, ಆದರೆ ಇದು ಎತ್ತಿರುವ ಸಮಸ್ಯೆ ಪ್ರಸ್ತುತವಾದುದು. ಇದಕ್ಕಾಗಿ ಸಿನಿಮಾ ನೋಡಬಹುದು.

# ಯುದ್ಧದಿಂದ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ

### ಪಶ್ಚಿಮ ಏಷ್ಯಾ, ಉಕ್ರೇನ್‌ನಲ್ಲಿ ಶಾಂತಿ ಸ್ಥಾಪಿಸಲು ಪ್ರಧಾನಿ ನರೇಂದ್ರ ಮೋದಿ ಕರೆ

• ಪ್ರಜೋದಯ ವರದಿ



**ನವದೆಹಲಿ:** ಪಶ್ಚಿಮ ಏಷ್ಯಾ ಮತ್ತು ಉಕ್ರೇನ್‌ನಲ್ಲಿ ನಡೆಯುತ್ತಿರುವ ಸಂಘರ್ಷಗಳನ್ನು ಶಾಂತಿಯುತವಾಗಿ ಪರಿಹರಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಕರೆ ನೀಡಿದ್ದಾರೆ.

ನಾಲ್ಕು ದಿನಗಳ ಭಾರತ ಭೇಟಿಯಲ್ಲಿರುವ ಆಸ್ಟ್ರಿಯಾದ ಫೆಡರಲ್ ಚಾನ್ಸಲರ್ ಕ್ರಿಶ್ಚಿಯನ್ ಸ್ಟಾಕರ್ ಅವರೊಂದಿಗೆ ನಡೆದ ದ್ವಿಪಕ್ಷೀಯ ಮಾತುಕತೆಯ ನಂತರ, ಸೇನಾ ಮುಖಾಮುಖಿಯ ಮೂಲಕ ಯಾವುದೇ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ ಎಂದು ಮೋದಿ ಸ್ಪಷ್ಟವಾಗಿ ಹೇಳಿದರು.

ಇಂದು, ಇಡೀ ಜಗತ್ತು ಬಹಳ ಗಂಭೀರ ಮತ್ತು ಉದ್ವಿಗ್ನ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಮೋದಿ ಹೇಳಿದರು. ಜಾಗತಿಕ ಉದ್ವಿಗ್ನತೆಯ ಪರಿಣಾಮವನ್ನು ಭಾರತವೂ ಅನುಭವಿಸುತ್ತಿದೆ ಎಂದು ಅವರು ಹೇಳಿದರು.

ಭಾರತ ಮತ್ತು ಆಸ್ಟ್ರಿಯಾ ಸಂಘರ್ಷಗಳನ್ನು ಸಂವಾದ ಮತ್ತು ರಾಜತಾಂತ್ರಿಕತೆಯ ಮೂಲಕ ಪರಿಹರಿಸಬೇಕು ಎಂಬ ಅಭಿಪ್ರಾಯವನ್ನು ಹಂಚಿಕೊಂಡಿವೆ ಎಂದು ಪ್ರಧಾನಿ ಅವರು ಹೇಳಿದರು.

ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಸ್ಥಿರ, ಸುಸ್ಥಿರ ಮತ್ತು ಶಾಶ್ವತ ಶಾಂತಿಯನ್ನು ನಾವು ಬೆಂಬಲಿಸುತ್ತೇವೆ ಎಂದು ಪ್ರಧಾನಿ ಮೋದಿ ಅವರು ತಿಳಿಸಿದ್ದಾರೆ.

ಭಾರತವು ಶಾಂತಿಯನ್ನು ಪ್ರತಿಪಾದಿಸುವುದಲ್ಲದೆ, ಭಯೋತ್ಪಾದನೆಯಂತಹ ಗಂಭೀರ ವಿಷಯಗಳ ಬಗ್ಗೆಯೂ ದೃಢವಾದ ನಿಲುವನ್ನು ತೆಗೆದುಕೊಳ್ಳುತ್ತದೆ ಎಂದು ಪ್ರಧಾನಿ ಮೋದಿ ಅವರು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದರು.

ಸಭೆಯ ಸಮಯದಲ್ಲಿ ಎರಡೂ ದೇಶಗಳ ನಡುವಿನ ಸಹಕಾರದ ಬಗ್ಗೆ ಪ್ರಮುಖ ಅಂಶಗಳನ್ನು ಸಹ ಪ್ರಸ್ತಾಪಿಸಲಾಯಿತು. ಆಸ್ಟ್ರಿಯಾದೊಂದಿಗೆ ಸಂಬಂಧವನ್ನು ಹೊಸ ಮಟ್ಟಕ್ಕೆ ಕೊಂಡೊಯ್ಯುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದರು.

ಮೂಲಸೌಕರ್ಯ, ನಾವೀನ್ಯತೆ ಮತ್ತು ಸುಸ್ಥಿರತೆಯಂತಹ ಕ್ಷೇತ್ರಗಳಲ್ಲಿ ಪಾಲುದಾರಿಕೆಗಳನ್ನು ಬಲಪಡಿಸುವ ಬಗ್ಗೆ ಒತ್ತು ನೀಡಲಾಯಿತು. ಐಐಟಿ ದೆಹಲಿ ಮತ್ತು ಮಾಂಟೇನ್ ವಿಶ್ವವಿದ್ಯಾಲಯದ ನಡುವಿನ ಒಪ್ಪಂದವನ್ನು ಜ್ಞಾನ ಪಾಲುದಾರಿಕೆಯ ಉತ್ತಮ ಉದಾಹರಣೆ ಎಂದು ಪ್ರಧಾನಿ ಮೋದಿ ಅವರು ಬಣ್ಣಿಸಿದರು.

### ಎಸ್ಸೆಸ್ಸೆಲ್ಸಿ: ತೃತೀಯ ಭಾಷೆಗೆ ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಭಾರೀ ಮುಖಭಂಗ

# ಅಂಕಗಳನ್ನೇ ನೀಡಲು ಹೈಕೋರ್ಟ್ ಆದೇಶ

• ಪ್ರಜೋದಯ ವರದಿ




**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗಳಿಗೆ ಅಂಕಗಳ ಬದಲು ಗ್ರೇಡ್ ನೀಡಲಾಗುವುದು ಮತ್ತು ವಾರ್ಷಿಕ ಪರೀಕ್ಷೆಯ ಅಂಕವನ್ನು 525ಕ್ಕೆ ಇಳಿಸಿ ಹೊರಡಿಸಿದ್ದ ರಾಜ್ಯ ಸರ್ಕಾರದ ಆದೇಶಕ್ಕೆ ತೀವ್ರ ಹಿನ್ನಡೆಯಾಗಿದೆ.

ಹಿಂದಿ ವಿಷಯದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಕಡ್ಡಾಯವಾಗಿ ದಾಖಲಿಸಬೇಕು ಮತ್ತು ಅವುಗಳನ್ನು ಒಟ್ಟು ಫಲಿತಾಂಶದ ಅಂಕಗಳ ಪಟ್ಟಿಯಲ್ಲಿ ಸೇರಿಸಬೇಕು ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಸರ್ಕಾರದ ನಿರ್ಧಾರದಿಂದ ಆತಂಕಕ್ಕೊಳಗಾಗಿದ್ದ ಸಾವಿರಾರು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನಿರಾಳವಾದಂತಾಗಿದೆ.

ಹಿಂದಿ ವಿಷಯಕ್ಕೆ ಅಂಕಗಳ ಬದಲಿಗೆ ಕೇವಲ ಎ, ಬಿ, ಸಿ ಅಂತಹ ಗ್ರೇಡ್‌ಗಳನ್ನು ನೀಡುವ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್ ಹಾಗೂ ಇತರ ಮೂವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಇಎಸ್ ಇಂದಿರೇಶ ಅವರಿದ್ದ ಏಕ ಸದಸ್ಯ ಪೀಠ ವಿಚಾರಣೆ ನಡೆಸಿತು.

ಸರ್ಕಾರದ ಈ ಕ್ರಮವು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಮಾರಕ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಶಿಕ್ಷಣ ಹಕ್ಕು ಮತ್ತು ಪರೀಕ್ಷಾ ನಿಯಮಾವಳಿಗಳ ಪ್ರಕಾರ ಪ್ರತಿ ವಿಷಯದ ಅಂಕಗಳು ಪಾರದರ್ಶಕವಾಗಿರಬೇಕು. ತೃತೀಯ ಭಾಷೆಯನ್ನು ಕೇವಲ ಗ್ರೇಡ್‌ಗೆ ಸೀಮಿತಗೊಳಿಸುವುದು ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಮೇಲೆ ಪರಿಣಾಮ ಬೀರಬಹುದು ಎಂದು ನ್ಯಾಯಪೀಠ ಎಚ್ಚರಿಸಿದೆ.

ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಶಿಕ್ಷಣತಜ್ಞರು, ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಹಾಗೂ ಸಾರ್ವಜನಿಕರಿಂದ ವ್ಯತಿರಿಕ್ತ ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಈ ವಿವಾದವು ಕೇವಲ ಅಂಕಗಳಿಗೆ ಸೀಮಿತವಾಗದೆ, ಭಾಷಾ ನೀತಿಯ ಸಂಘರ್ಷವಾಗಿಯೂ ಬದಲಾಗಿತ್ತು.

ತೃತೀಯ ಭಾಷೆಗೆ ಅಂಕ ನೀಡದಿದ್ದರೆ ವಿದ್ಯಾರ್ಥಿಗಳು ಆ ವಿಷಯದ ಕಡೆಗೆ ಆಸಕ್ತಿ ಕಳೆದುಕೊಳ್ಳುತ್ತಾರೆ ಮತ್ತು ಇದು ಭವಿಷ್ಯದಲ್ಲಿ ಉದ್ಯೋಗ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವರಿಗೆ ಹಿನ್ನಡೆಯಾಗಬಹುದು ಎಂಬ ವಾದ ಕೇಳಿ ಬಂದಿತ್ತು.

ಈಗ ಹೈಕೋರ್ಟ್ ನೀಡಿದ ಆದೇಶವು ಸರ್ಕಾರದ ಈ ವಿವಾದಾತ್ಮಕ ನಿರ್ಧಾರಕ್ಕೆ ಬ್ರೇಕ್ ಹಾಕಿದೆ.

# ಏ.30 ರೊಳಗೆ ಆಸ್ತಿ ತೆರಿಗೆ ಪಾವತಿಸಿ

• ಪ್ರಜೋದಯ ವರದಿ



**ಆಲೂರು:** ಪಟ್ಟಣ ಪಂಚಾಯಿತಿ ವ್ಯಾಪ್ತಿಗೊಳಪಡುವವರು 2026-27 ನೆ ಸಾಲಿನ ತಮ್ಮ ಆಸ್ತಿ ತೆರಿಗೆಯನ್ನು ಏ.30 ರೊಳಗೆ ಪಾವತಿ ಮಾಡಿದರೆ ಶೇ.5ರಷ್ಟು ವಿನಾಯಿತಿ ದೊರಕಲಿದೆ ಎಂದು ಪ.ಪಂ. ಆಡಳಿತಾಧಿಕಾರಿ ಹಾಗೂ ತಹಸೀಲ್ದಾರ್ ಮಲ್ಲಿಕಾರ್ಜುನ ಮತ್ತು ಮುಖ್ಯಾಧಿಕಾರಿ ಮಂಜುನಾಥ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 1 ರಿಂದ ಜೂ. 30 ರೊಳಗೆ ಪಾವತಿಸುವವರಿಗೆ ದಂಡ ಪಾವತಿಯಲ್ಲಿ ವಿನಾಯಿತಿ ಇರುತ್ತದೆ. ಜು. 1 ರ ನಂತರ ಪಾವತಿಸುವವರಿಗೆ ಆಸ್ತಿ ತೆರಿಗೆ ಮೊತ್ತದ ಮೇಲೆ ಪ್ರತಿ ತಿಂಗಳು ಶೇ. 2 ರಷ್ಟು ದಂಡ ವಿಧಿಸಲಾಗುತ್ತದೆ.

ಸಾರ್ವಜನಿಕರು, ಉದ್ದಿಮೆದಾರರು ಪ್ರತಿನಿತ್ಯ ತಮ್ಮ ಮನೆ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಹಸಿ ಮತ್ತು ಒಣ ಕಸವನ್ನಾಗಿ ವಿಂಗಡಿಸಿ ತ್ಯಾಜ್ಯ ವಿಲೇವಾರಿ ವಾಹನಕ್ಕೆ ನೀಡಬೇಕು.

ಉದ್ದಿಮೆದಾರರು ಪರವಾನಗಿ/ಉದ್ದಿಮೆ ನವೀಕರಣ ಮಾಡಿಕೊಳ್ಳಬೇಕು. ಅಂಗಡಿ ಮುಂಭಾಗ ಅಳವಡಿಸುವ ನಾಮಫಲಕ ಶೇ. 60 ಭಾಗ ಕನ್ನಡ ಭಾಷೆಯಿಂದ ಕೂಡಿರಬೇಕು. ನಾಮಫಲಕದಲ್ಲಿ ಮಕ್ಕಳ ಸಹಾಯವಾಣಿ ನಂ. 1098 ಬರೆಸಿರಬೇಕು.

ಪ್ರಸ್ತುತ ಬೇಸಿಗೆ ಕಾಲವಾಗಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ, ಸಾರ್ವಜನಿಕರು ಕುಡಿಯಲು ಕುದಿಸಿ ಆರಿಸಿದ ನೀರನ್ನು ಬಳಸಬೇಕು. ಪ್ರತಿ ಹೋಟೆಲ್ಲುಗಳಲ್ಲಿ ಆಸಕ್ತರಿಗೆ ಬಿಸಿ ನೀರು ಕೊಡಬೇಕು.

ಪ.ಪಂ. ವತಿಯಿಂದ ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ಪಡೆದಿರುವವರು ನಿಗಧಿತ ಸಮಯದಲ್ಲಿ ಬಾಡಿಗೆಯನ್ನು ಪಾವತಿಸಿದ್ದರೆ ಮಳಿಗೆಗಳಿಗೆ ಬೀಗ ಹಾಕಿ, ಪಾವತಿಸಿರುವ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆಗಳನ್ನು ಪ.ಪಂ. ವಶಕ್ಕೆ ಪಡೆದು, ಮರು ಹರಾಜು ಮಾಡಿ ಬಾಕಿ ವಸೂಲಿಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಹಸಿರು ಹಾಸನ-2026 ಅಂಗವಾಗಿ ಮನೆ ಮುಂದೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಿಡಗಳನ್ನು ಪೋಷಿಸಿ ಸಹಕರಿಸಬೇಕು ಎಂದಿದ್ದಾರೆ.

# ಅರಸೀಕೆರೆ: ಶ್ರೀ ಬಸವೇಶ್ವರ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ

• ಪ್ರಜೋದಯ ವರದಿ



**ಅರಸೀಕೆರೆ:** ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಸ್ಥಾಪನೆ ಸ್ಥಳ ಕುರಿತು ಪರ ವಿರೋಧದ ನಡುವೆಯೂ ನಗರದ ಪಿಪಿ ವೃತ್ತಕ್ಕೆ ಹೊಂದಿಕೊಂಡಂತೆ ಶ್ರೀ ಜಗಜ್ಯೋತಿ ಬಸವೇಶ್ವರ ಪುತ್ಥಳಿ ನಿರ್ಮಾಣ ಸಮಿತಿ ಗುರುವಾರ ಭೂಮಿ ಪೂಜೆ ನೆರವೇರಿಸುವ ಮೂಲಕ ಅಂತಿಮ ಸ್ಥಳ ನಿಗದಿಪಡಿಸಿದೆ.

ಭೂಮಿ ಪೂಜೆಯಲ್ಲಿ ಪಾಲ್ಗೊಂಡ ಗೃಹ ಮಂಡಳಿಯ ಅಧ್ಯಕ್ಷರು ಆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ಸಮಾನತೆಯ ಪ್ರತಿಪಾದಕ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಸ್ಥಾಪನೆ ಕುರಿತು ಸಲ್ಲದ ಹೇಳಿಕೆಗಳನ್ನು ನೀಡುವುದು ತರವಲ್ಲ. ಜಾತಿ ಮತ ಪಕ್ಷಬೇಧ ಮರೆತು ಎಲ್ಲರೂ ಸೇರಿ ಶ್ರದ್ದೆ ಮತ್ತು ಭಕ್ತಿಯಿಂದ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ನಾವೆಲ್ಲರೂ ಗೌರವ ಸಮರ್ಪಿಸೋಣ ಎಂದು ಕರೆ ನೀಡಿದರು.

ಆಕರ್ಷಕ ರೂಪದಲ್ಲಿ ಬಸವಣ್ಣನವರ ಪುತ್ಥಳಿ ನಿರ್ಮಾಣವಾಗುತ್ತಿದ್ದು ನಗರದ ಹೃದಯ ಭಾಗವಾಗಿರುವ ಈ ಪ್ರದೇಶದಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪಿಸುವುದರಿಂದ ಬಸವಣ್ಣನವರ ಅನುಯಾಯಿಗಳ ಸಂತಸಕ್ಕೆ ಕಾರಣವಾಗಿದೆ ಎಂದರು.

ಸಮಿತಿಯ ಜಿ.ವಿ.ಶಶಿಧರ್ ಅವರು ಮಾತನಾಡಿ, ನಗರ ಸೇರಿದಂತೆ ತಾಲೂಕಿನಲ್ಲಿ ಬಸವ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಇವರೆಲ್ಲರ ದಶಕಗಳ ಕನಸು ಇನ್ನು ಕೆಲವೇ ದಿನಗಳಲ್ಲಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಲೋಕಾರ್ಪಣೆಯೊಂದಿಗೆ ನನಸಾಗಲಿದೆ ಎಂದು ಸಂತಸ ಹಂಚಿಕೊಂಡರು.

ಸಮಿತಿಯ ಅಧ್ಯಕ್ಷ ಅಡವಿ ಸ್ವಾಮಿ ಮಾತನಾಡಿ ತಾಲೂಕಿನ ಜನತೆಯ ಕನಸು ನಗರದಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪಿಸಬೇಕೆಂಬುದಾಗಿತ್ತು, ಈಗ ಆ ಕಾಲ ಕೂಡಿ ಬಂದಿದೆ. ಪ್ರತಿಮೆ ಸ್ಥಾಪನೆಗೆ ಸಹಕಾರ ನೀಡುತ್ತಿರುವ ಎಲ್ಲರಿಗೂ ಜಗಜ್ಯೋತಿ ಬಸವೇಶ್ವರರ ಅನುಗ್ರಹ ಪ್ರಾಪ್ತಿಯಾಗಲಿ ಎಂದು ಆಶಿಸಿದರು.

ಶ್ರೀ ಜಗಜ್ಯೋತಿ ಬಸವೇಶ್ವರ ಪುತ್ಥಳಿ ನಿರ್ಮಾಣ ಸಮಿತಿಯ ಕಾರ್ಯಾಧ್ಯಕ್ಷ ಗಂಜಿಗೆರೆ ಚಂದ್ರಶೇಖರ್, ಉಪಾಧ್ಯಕ್ಷ ಜಿ.ವಿ. ಬಸವರಾಜ್, ಕಾರ್ಯದರ್ಶಿ ಜ್ಞಾನೇಶ್, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಶೇಖರ್, ಸಮಿತಿಯ ಜಯಣ್ಣ, ಉಮೇಶ, ಬಂಕ್ ಮಂಜಣ್ಣ, ಮತ್ತಿತರರು ಉಪಸ್ಥಿತರಿದ್ದರು.

### ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್ ಅಗತ್ಯ ದಾಸ್ತಾನು ಲಭ್ಯ

**ಹಾಸನ:** ಜಿಲ್ಲೆಯ ಪೆಟ್ರೋಲ್ ಬಂಕ್ ಹಾಗೂ ಡೀಸೆಲ್ ಉಪಯೋಗಿಸುವ ಗ್ರಾಹಕರಿಗೆ ತಿಳಿಯಪಡಿಸುವುದೇನೆಂದರೆ, ಜಿಲ್ಲೆಯಲ್ಲಿ ಒಟ್ಟು 228 ಪೆಟ್ರೋಲ್ ಬಂಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಪೆಟ್ರೋಲ್ ಬಂಕ್ ಗಳಲ್ಲಿ ದಾಸ್ತಾನು ಅಗತ್ಯ ಪ್ರಮಾಣದಲ್ಲಿ ಲಭ್ಯವಿರುವುದರಿಂದ, ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಯಾವುದಾದರೂ ಪೆಟ್ರೋಲ್ ಬಂಕ್‌ನಲ್ಲಿ ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುತ್ತಿರುವುದು ಕಂಡುಬಂದಲ್ಲಿ, ಗ್ರಾಹಕರಿಗೆ ಪೆಟ್ರೋಲ್ ಹಾಗೂ ಡೀಸೆಲ್ ನೀಡದೆ ಇದ್ದಲ್ಲಿ ದೂ. ಸಂಖ್ಯೆ: 9606025519 ಸಂಖ್ಯೆಗೆ ದೂರು ಸಲ್ಲಿಸಬಹುದಾಗಿದೆ.

# ಮುಸ್ಲಿಂ ಯುವಕನಿಂದ ಟೈಲರ್ ಮೇಲೆ ಹಲ್ಲೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ಪಟ್ಟಣದ ಪೇಟೆ ಬೀದಿಯ ಮಳಿಗೆಯೊಂದರಲ್ಲಿ ಮದುವೆ ಬಟ್ಟೆ ತುರ್ತು ಹೊಲಿಗೆ ಮಾಡುತ್ತಿದ್ದವರ ಮೇಲೆ ಅಜೀಜ್ ಎಂಬ ಮುಸ್ಲಿಂ ಯುವಕ ಗಲಾಟೆ ಮಾಡಿ ಕತ್ತರಿಯಿಂದ ಚುಚ್ಚಿ ಹೊಲಿಗೆ ಯಂತ್ರಗಳನ್ನು ಜಖಂಗೊಳಿಸಿದ್ದಾನೆ.

ಕಂಚುಗಾರರ ಬೀದಿ ನಿವಾಸಿ ಕುಮಾರ್ ಎಂಬ ಟೈಲರ್ ಗಾಯಗೊಂಡಿದ್ದು, ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮದುವೆಯೊಂದರ ನಿಮಿತ್ತ ಬುಧವಾರ ತಡರಾತ್ರಿ 2.30 ರ ಸಮಯ ಕುಮಾರ್ ಮತ್ತು ಅಕ್ಷತಾ ಎಂಬುವವರು ಮಳಿಗೆಯಲ್ಲಿ ಗಿರಾಕಿಗಳ ಬಟ್ಟೆ ಸ್ಟಿಚ್ಚಿಂಗ್ ಮಾಡುತ್ತಿದ್ದರು. ಇದೇ ಸಮಯದಲ್ಲಿ ಮಳಿಗೆ ರೋಲಿಂಗ್ ಶೆಟ್ಟರ್ಸ್ ತೆಗೆದು ಒಳ ಹೊಕ್ಕಿದ್ದಾನೆ. ನೀವಿಬ್ಬರೂ ತಡರಾತ್ರಿ ಇಲ್ಲೇನು ನಡೆಸಿದ್ದೀರಿ ಎಂದು ಶಂಕಿಸಿ ಬೈದಿದ್ದಾನೆ. ನಂತರ ಪ್ರತಿರೋಧಿಸಿದ ಕುಮಾರ್‌ನ ಮೇಲೆ ಅಲ್ಲೇ ಇದ್ದ ಕತ್ತರಿಯಿಂದ ಎದೆಭಾಗಕ್ಕೆ ಮತ್ತು ತಲೆಗೆ ಚುಚ್ಚಿದ್ದಾನೆ. ರಕ್ಷಣೆಗೆ ಧಾವಿಸಿದ ಅಕ್ಷತಾಳ ಹೊಲಿಗೆ ಯಂತ್ರಗಳನ್ನು ಎಸೆದಿದ್ದಾನೆ.

ಇಬ್ಬರೂ ಒಟ್ಟಿಗೆ ಇರುವುದು ಕಂಡರೇ, ಕೊಲೆ ಮಾಡುವುದಾಗಿ ಅಜೀಜ್ ಬೆದರಿಕೆ ಹಾಕಿದ್ದಾನೆ. ಗಯಾಳು ಕುಮಾರ್‌ನ ಹೇಳಿಕೆ ಪಡೆದಿರುವ ಪೊಲೀಸರು ಪ್ರಸ್ತುತ ಆರೋಪಿ ಅಜೀಜ್‌ನ ಬಂಧನಕ್ಕಾಗಿ ಹುಡುಕಾಟ ನಡೆಸಿದ್ದಾರೆ. ನಗರ ಪೊಲೀಸ್‌ಠಾಣೆಯಲ್ಲಿ ಪ್ರಕರಣ ಕುರಿತು ದೂರು ದಾಖಲಾಗಿದೆ.

# ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಚಿಂತನೆ ಬೆಳೆಸುತ್ತವೆ

### ಸಾಹಿತ್ಯ ವೇದಿಕೆ ಸದಾ ಹೊಸ ಪ್ರತಿಭೆಗಳ ಹುಡುಕಾಟ ಮಾಡುತ್ತದೆ: ಕೆ.ಸಿ.ಗೀತಾ

• ಪ್ರಜೋದಯ ವರದಿ



**ಹಾಸನ:** ಕ್ರಾಫ್ಟ್ ಮಕ್ಕಳಲ್ಲಿ ಚಿಂತನಾ ಹಾಗೂ ಸೃಜನಾತ್ಮಕತೆಯನ್ನು ವೃದ್ಧಿಸುತ್ತದೆ. ಮಿತವ್ಯಯ ಸಾಮಾಗ್ರಿಗಳನ್ನು ಬಳಸಿಕೊಂಡು ಗುಣಮಟ್ಟದ ಆಕರ್ಷಕ, ಮನಮೋಹಕ ಕುಶಲತೆಯ ಪರಿಕರಗಳನ್ನು ಸೃಜಿಸುವುದು ಕ್ರಾಫ್ಟಿನ ಪ್ರಮುಖ ಧ್ಯೇಯವಾಗಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ತಾಲ್ಲೂಕು ಅಧ್ಯಕ್ಷೆ ಕೆ.ಸಿ.ಗೀತಾ ಅಭಿಪ್ರಾಯಪಟ್ಟರು.

ಅವರು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ (ರಿ.), ಬೆಂಗಳೂರು, ತಾಲ್ಲೂಕು ಘಟಕ ಹಾಸನ ಹಾಗೂ ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಂಸ್ಥೆ ಹಾಸನ ವತಿಯಿಂದ ಜಿಲ್ಲಾ ಸ್ಕೌಟ್ಸ್ ಗೈಡ್ಸ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಕ್ರಾಫ್ಟ್ ತರಗತಿ ನೀಡಿ ಮಾತನಾಡಿ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಪ್ರತಿವರ್ಷ ಹೊಸ ಪ್ರತಿಭೆಗಳ ಹುಡಕಾಟದಲ್ಲಿ ತೊಡಗಿಸಿಕೊಂಡು ಅದರಲ್ಲೂ ವಿದ್ಯಾರ್ಥಿ ಮತ್ತು ಯುವ ಜನರಲ್ಲಿ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ, ಧಾರ್ಮಿಕ ಮೌಲ್ಯಗಳನ್ನು ಬಿತ್ತುವ ನಿಟ್ಟಿನಲ್ಲಿ ಕಳೆದ ಏಳೆಂಟು ವರ್ಷಗಳಿಂದ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ವಿಭಿನ್ನವಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ ಎಂದು ತಿಳಿಸಿದರು.

ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ.ಪ್ರಿಯಾಂಕ ಮಾತನಾಡಿ, ಪ್ರತಿವರ್ಷ ಎರಡೂ ಸಂಸ್ಥೆಗಳಿದ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡುತ್ತಿದ್ದು ಹೊಸ ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುತ್ತಿದ್ದೇವೆ. ಮಕ್ಕಳು ಕೇವಲ ಪಠ್ಯಕ್ಕೆ ಮಾತ್ರ ಸೀಮಿತಗೊಳ್ಳದೇ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ವೇದಿಕೆಯಲ್ಲಿ ತಿಪಟೂರು ತಾಲ್ಲೂಕು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಅಧ್ಯಕ್ಷೆ ಲತಾಮಣಿ ಎಂ.ಕೆ. ತುರುವೇಕೆರೆ, ಪ್ರತಿಮಾ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷೆ ಎಚ್.ಎಸ್. ಪ್ರತಿಮಾ, ಯೋಗಶಿಕ್ಷಕಿ ಗಿರಿಜಾ ನಿರ್ವಾಣಿ, ಗೈಡ್ ಕ್ಯಾಪ್ಟನ್ ಅಶ್ವಿನಿ ಭೈರಾಪುರ, ಗೈಡ್ ಕ್ಯಾಪ್ಟನ್ ಶ್ರೀ, ಲೇಡಿ ಸ್ಕೌಟ್ ಮಾಸ್ಟರ್ ರೇಣುಕಾ ಭೈರಾಪುರ, ಜಿಲ್ಲಾ ಖಜಾಂಚಿ ಆರ್.ಎಸ್. ರಮೇಶ್ ಸೇರಿದಂತೆ 50 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಹಾಜರಿದ್ದರು.

# ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಇಂದು ರೈತರಿಂದ ಪ್ರತಿಭಟನೆ




• ಪ್ರಜೋದಯ ವರದಿ

**ಅರಕಲಗೂಡು:** ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಏ.17 ರಂದು ಪಟ್ಟಣದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘದ ಪುಟ್ಟಣ್ಣಯ್ಯ ಬಣದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಎಸ್.ತಿಮ್ಮೇಗೌಡ ತಿಳಿಸಿದರು.

ಅಡಿಕೆಬೊಮ್ಮನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ ಮುಗಿದು 22 ವರ್ಷ ಕಳೆದರೂ ಭೂಮಿ ಕಳೆದುಕೊಂಡ ಸಂತ್ರಸ್ಥ ರೈತರಿಗೆ ಸಮರ್ಪಕವಾಗಿ ಪರಿಹಾರ ಒದಗಿಸಿಲ್ಲ. ಕಾಮಗಾರಿಯನ್ನೂ ಸರಿಯಾಗಿ ಪೂರ್ಣಗೊಳಿಸಿಲ್ಲ. ಅಂಕನಾಯಕನ ಕೊಪ್ಪಲು, ಉಲಿವಾರ, ವಡ್ಡರಹಳ್ಳಿ, ನೇರಲಹಳ್ಳಿ, ನೇರಲಹಳ್ಳಿಕೊಪ್ಪಲು, ನೈಗೆರೆ, ಮರಡಿ ಭಾಗಕ್ಕೆ ಯೋಜನೆ ಮೂಲಕ ನಾಲೆಗೆ ನೀರು ಹರಿಸಿಲ್ಲ, ಅಧಿಕಾರಿಗಳು ರೈತರ ಹಿತ ನಿರ್ಲಕ್ಷ್ಯಿಸಿದ್ದಾರೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ದೂರಿದರು.

ಪಟ್ಟಣದ ಕೊಳಚೆ ನೀರು ರಾಜಕಾಲುವೆಯಲ್ಲಿ ಹರಿದು ಚೋಳೇನಹಳ್ಳಿ, ಕಾಶೀಪುರ, ನೈಗೆರೆ ಭಾಗದ ಕೆರೆ ಕಟ್ಟೆಗಳಿಗೆ ಹರಿದು ಇದೇ ಕಲುಷಿತ ನೀರನ್ನು ಜಾನುವಾರುಗಳು ಕುಡಿದು ರೋಗ -ರುಜಿನಗಳಿಗೆ ತುತ್ತಾಗುತ್ತಿವೆ. ಈ ಸಮಸ್ಯೆ ಬಗೆಹರಿಸಬೇಕು. ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ಪೂರೈಕೆ ಮಾಡಬೇಕು. ಈ ಕುರಿತು ಪಟ್ಟಣದ ಅನಕೃ ವೃತ್ತದಿಂದ ತಾಲ್ಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಲಿದೆ ಎಂದರು.

ಸಂಘದ ಅಧ್ಯಕ್ಷ ಕೆ.ಕೆ.ರವಿ, ಸದಸ್ಯರಾದ ಮುತ್ತೇಗೌಡ, ಸ್ವಾಮಿಗೌಡ, ಲಕ್ಷ್ಮಣಶೆಟ್ಟಿ, ರೇವಣ್ಣ ಗೋಷ್ಠಿಯಲ್ಲಿದ್ದರು.

# ಮಹಿಳಾ ಮೀಸಲಾತಿ ಮಸೂದೆ: ಕಾಂಗ್ರೆಸ್ ಅಪಸ್ವರ ಎತ್ತಿದರೆ ಪಕ್ಷದ ಭವಿಷ್ಯ ಗಂಭೀರ

• ಪ್ರಜೋದಯ ವರದಿ

**ಬೆಂಗಳೂರು:** ಮಹಿಳಾ ಮೀಸಲಾತಿ ಮಸೂದೆಗಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದ್ದು, ಮಹಿಳೆಯರಿಗೂ ಕಾನೂನು ರಚನೆಗೆ ಸಮಾನ ಅವಕಾಶ ಸಿಗಲಿದೆ. ಇದಕ್ಕೆ ವಿರೋಧ ಪಕ್ಷ ಕಾಂಗ್ರೆಸ್ ಅಪಸ್ವರ ಎತ್ತಿದರೆ ಪಕ್ಷದ ಭವಿಷ್ಯ ಗಂಭೀರವಾಗಲಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ''ಜಗನ್ನಾಥ ಭವನ''ದಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರು ದೇಶದಲ್ಲಿ ಸರ್ವರಿಗೂ ಸಮಾನ ಹಕ್ಕು ಇರಬೇಕು, ಸಮಾನ ಅವಕಾಶ ಸಿಗಬೇಕು ಎಂದು ಬಯಸಿದ್ದರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದೂ ಹೇಳಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ಬಾಬಾ ಸಾಹೇಬರ ಚಿಂತನೆಗೆ ಶಕ್ತಿ ಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಹಿಂದೆ ಮಹಿಳೆಯರಿಗೆ ಅವಕಾಶ, ಅಧಿಕಾರ ಮತ್ತು ಸಮಾನ ಹಕ್ಕು ಕೊಡುವಲ್ಲಿ ಬಾಯಿ ಮಾತಿನ ಭಾಷಣ ಇತ್ತೇ ಹೊರತು ಹೃದಯವಂತಿಕೆ ಇರಲಿಲ್ಲ. ಆದರೆ ಇಂದು ನಾರಿ ಶಕ್ತಿ ಹೆಸರಿನಲ್ಲಿ ಪ್ರಧಾನಿಯವರು ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸುತ್ತಿದ್ದಾರೆ. ಇನ್ನು ಮುಂದೆ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯ ಅವಕಾಶಗಳ ದೊರೆಯಲಿವೆ ಎಂದರು.

**ಕಾಟಾಚಾರದ ಅಂಬೇಡ್ಕರ್ ಜಯಂತಿ:** ಕರ್ನಾಟಕ ಸರ್ಕಾರ ಅಂಬೇಡ್ಕರ್ ಜಯಂತಿಯನ್ನು ಕಾಟಾಚಾರಕ್ಕೆ ಆಚರಿಸಿತು. ಆಚರಣೆಯಲ್ಲಿ ಬಾಬಾ ಸಾಹೇಬರ ಬಗ್ಗೆ ವಿಶ್ವಾಸ ಹಾಗೂ ಪ್ರೀತಿ ಕಾಣಲಿಲ್ಲ. ಕಾರ್ಯಕ್ರಮದ ನಿಗದಿತ ಸಮಯಕ್ಕೆ ಮುಖ್ಯಮಂತ್ರಿಗಳು ಬರಲಿಲ್ಲ. ಕಾಂಗ್ರೆಸ್ ಕಾರ್ಯಕ್ರಮವಾಗಿದ್ದರೆ ಮುಖ್ಯಮಂತ್ರಿಗಳು ಸಮಯಕ್ಕೆ ಸರಿಯಾಗಿ ಬರುತ್ತಿದ್ದರು ಎಂದು ದೂರಿದರು.




**ಓಟ್ ಬ್ಯಾಂಕ್‌ಗಾಗಿ ಕಪಟ ನಾಟಕ ಆಡಬೇಡಿ:** ಸಿದ್ದರಾಮಯ್ಯ ಅವರು ಕಾಂಗ್ರೆಸ್ ವಿರೋಧಿಯಾಗೇ ಬದುಕಿದವರು. ಈಗ ಕಾಂಗ್ರೆಸ್‌ಗೆ ಬಂದು ಸುಳ್ಳು ಹೇಳಲು ಆರಂಭಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಸಿದ್ದರಾಮಯ್ಯ ಅವರು ಇಷ್ಟು ಹಗುರವಾಗಿ ಮಾತನಾಡಬಾರದು ಎಂದರು. ಸಿದ್ದರಾಮಯ್ಯ ಅವರು ಸುಳ್ಳುರಾಮಯ್ಯ ಹೋಗಿ ಕುರುಡುರಾಮಯ್ಯ ಆಗಿದ್ದಾರೆ. ಸುಳ್ಳು ಹೇಳುವುದರಲ್ಲಿ ನಿಸ್ಸೀಮರಾದ ಪ್ರಿಯಾಂಕ್ ಖರ್ಗೆ ಅವರು ಕೊಟ್ಟ ಪತ್ರ ಓದಿ ಸುಳ್ಳು ಹೇಳಬೇಡಿ.

ನೆಹರು ಅವರು ಪತ್ರದಲ್ಲೇ ಅಂಬೇಡ್ಕರ್ ಸೋಲಿಸಿದ್ದು ನಾವೇ ಎಂದು ಹೇಳಿದ್ದಾರೆ. ಇಷ್ಟೇಲ್ಲಾ ಇರುವಾಗ ಸಿದ್ದರಾಮಯ್ಯ ಅವರು ಎಲ್ಲಾ ಸುಳ್ಳು ಅಂತಾರೆ. ಓಟ್ ಬ್ಯಾಂಕ್‌ಗಾಗಿ ಕಾಂಗ್ರೆಸ್ ಕಪಟ ನಾಟಕ ಆಡಬೇಡಿ. ಸತ್ಯ ಒಪ್ಪಿಕೊಳ್ಳಿ ಎಂದು ಆಗ್ರಹಿಸಿದರು.

**ಮೋದಿ ವಿರುದ್ಧ ಕೆಟ್ಟ ಪದ ಬಳಕೆ ನಿಲ್ಲಿಸಲಿ**

ಪ್ರಧಾನಿಯವರಿಗೆ ಸಿದ್ದರಾಮಯ್ಯ ಅವರು ಹದಿನೆಂಟು ಬೇಡಿಕೆ ನೀಡಿದ್ದಾರೆ. ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಮುಖಂಡರೂ ಭೇಟಿ ಮಾಡುವ ರೀತಿಗಿಂತ ಚೆನ್ನಾಗಿ ಮೋದಿಯವರು ಭೇಟಿ ಮಾಡಿದರು. ಮೋದಿಯವರು ಸಿದ್ದರಾಮಯ್ಯ ಅವರ ಕಿವಿಯ ಹತ್ತಿರ ಎಷ್ಟೊಂದು ಚೆಂದವಾಗಿ ಮಾತನಾಡಿದರು. ಆದರೆ ರಾಹುಲ್ ಗಾಂಧಿ ಅವರು ಎಂದೂ ಈ ರೀತಿ ಮಾತನಾಡಿಲ್ಲ. ಅವರು ಅಂತರ ಕಾಪಾಡುತ್ತಾರೆ. ಕಾಂಗ್ರೆಸ್‌ನವರು ಎಲ್ಲರ ಬಳಿ ಸಮಾನ ಅಂತರ ಕಾಪಾಡುತ್ತಾರೆ. ಏಕೆಂದರೆ ಬಾಸಿಸಂ ತೋರಿಸುತ್ತಾರೆ. ಮೋದಿ ಅವರು ಬಾಸ್ ಅಲ್ಲ ಎಂದು ಸಮರ್ಥಿಸಿಕೊಂಡರು.

ಹದಿನೆಂಟು ಯೋಜನೆಗಳಿಗೆ ಕೇಂದ್ರ ಸರ್ಕಾರದ ಬಳಿ ಹಣ ಕೇಳುವ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದಿಂದ ಏನು ಮಾಡಿದ್ದಾರೆ ಎಂದು ಹೇಳಲಿ. ಕೊಟ್ಟರೆ ಮಾತ್ರ ಅಭಿವೃದ್ಧಿ ಮಾಡುವವರೇ. ಕೇಂದ್ರದ ಪಾಲು ಬರಬೇಕಿದ್ದರೆ ಮಾತ್ರ ಮನವಿ ನೀಡಿ. ಸಿದ್ದರಾಮಯ್ಯ ಅವರನ್ನು ಇಷ್ಟೊಂದು ಪ್ರೀತಿಯಿಂದ ಕಂಡ ಮೋದಿ ಅವರನ್ನೇ ಹಗಲು ರಾತ್ರಿ ನಿಂದಿಸುತ್ತಾರೆ. ಈಗಲಾದರೂ ಸಿದ್ದರಾಮಯ್ಯ ಅವರಿಗೆ ನಾಚಿಕೆ ಆಗಿರಬೇಕು. ಇಂದಿನಿಂದ ಮೋದಿ ಅವರ ವಿರುದ್ಧ ಕೆಟ್ಟ ಪದ ಬಳಕೆಯನ್ನು ಇನ್ನಾದರೂ ನಿಲ್ಲಿಸಲಿ ಎಂದರು.

**ಬೆಂಗಳೂರು:** 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ -2 ಬರೆಯಲು ಇಚ್ಛಿಸುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ನೀಡಲಾಗಿದ್ದ ಅಂತಿಮ ಗಡುವನ್ನು ಏ. 18 ರವರೆಗೆ ವಿಸ್ತರಿಸಿ ಮಂಡಳಿಯು ಸುತ್ತೋಲೆ ಹೊರಡಿಸಿದೆ.

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರ ಹಾಸನ ಜಿಲ್ಲೆ ಹಾಸನ ತಾಲ್ಲೂಕು, ದುದ್ದ ಹೋಬಳಿ, ಕೋರವಂಗಲ ಕಾವಲು ಗ್ರಾಮದ ಸರ್ವೆ ನಂಬರ್ 1/ಪಿ154 ರಲ್ಲಿ 02-00 ಎಕರೆ ವಿಸ್ತೀರ್ಣದ ಸ್ವತ್ತು ಹಾಗೂ ಇದೇ ಗ್ರಾಮದ ಸರ್ವೆ ನಂಬರ್ 1/ಪಿ155 ರಲ್ಲಿನ 02-00 ಎಕರೆ ವಿಸ್ತೀರ್ಣದ ಸ್ವತ್ತು ಹೀಗೆ ಒಟ್ಟು 04-00 ಎಕರೆ ವಿಸ್ತೀರ್ಣದ ಸ್ವತ್ತುಗಳನ್ನು ಸ್ವತ್ತಿನ ಮಾಲೀಕರಾದ ಬಿ.ಎಸ್. ಕೆಂಪಲಿಂಗೇಗೌಡ ಅಲಿಯಾಸ್ ಡಿ.ಎಸ್. ರಾಜು ಬಿನ್ ಲೇಟ್ ಡಿ.ಕೆ. ಸಿದ್ದಲಿಂಗೇಗೌಡ ಎಂಬುವವರಿಂದ ಖರೀದಿ ಮಾಡಲು ಇಚ್ಛಿಸಿದ್ದು, ಈ ಮೇಲ್ಕಂಡ ಆಸ್ತಿಗಳ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಭಾಗಶಃ ಹಿಸ್ಸಾ ಅಥವಾ ಯಾವುದೇ ರೀತಿಯ ತಂಟೆ-ತಕರಾರುಗಳು ಇದ್ದಲ್ಲಿ, ಅಂತಹವರು ಈ ಪ್ರಕಟಣೆ ಪ್ರಕಟವಾದ 15 ದಿನಗಳ ಒಳಗಾಗಿ ತಮ್ಮ ಹಕ್ಕನ್ನು ದೃಢೀಕರಿಸುವ/ಪ್ರತಿಪಾದಿಸುವ ಮೂಲ ದಾಖಲಾತಿಗಳೊಂದಿಗೆ ಈ ಕೆಳಕಂಡ ವಕೀಲರಿಗೆ ಲಿಖಿತ ರೂಪದಲ್ಲಿ ತಕರಾರು ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ರೀತಿಯ ಯಾವುದೇ ಆಕ್ಷೇಪಣೆಗಳು ಬರದಿದ್ದಲ್ಲಿ, ಈ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು ಇರುವುದಿಲ್ಲವೆಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಮಾಲೀಕರಿಂದ ಸದರಿ ಸ್ವತ್ತನ್ನು ಖರೀದಿ ಮಾಡಲು ಸಿದ್ದರಿದ್ದು, ತದನಂತರ ಬರುವ ಯಾವುದೇ ತಕರಾರುಗಳು ನಮ್ಮ ಕಕ್ಷಿದಾರರ ಮಾಲೀಕತ್ವ, ಸ್ವಾಧೀನ ಮತ್ತು ಹಿತಾಸಕ್ತಿಗಳಿಗೆ ಭಧ್ದಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಸ್ವತ್ತಿನ ಅನುಸೂಚಿ**

1. ಹಾಸನ ತಾಲ್ಲೂಕು, ದುದ್ದ ಹೋಬಳಿ, ಕೋರವಂಗಲ ಕಾವಲು ಗ್ರಾಮದ ಸರ್ವೆ ನಂಬರ್ 1/ಪಿ154ರ ವಿಸ್ತೀರ್ಣ 02-00 ಎಕರೆ ವಿಸ್ತೀರ್ಣದ ರೆವಿನ್ಯೂ ಖಾತಾ ಸಂ:621, ಎಂ.ಆರ್.ಸಂ: 31/94-95 ರಂತೆ ಖಾತೆ ಇರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.1/ಪಿ155 ರ ಬಿ.ಎಸ್. ಕೆಂಪಲಿಂಗೇಗೌಡ ಅಲಿಯಾಸ್ ಡಿ.ಎಸ್. ರಾಜು ಬಿನ್ ಲೇಟ್ ಡಿ.ಕೆ. ಸಿದ್ದಲಿಂಗೇಗೌಡ, ಪಶ್ಚಿಮಕ್ಕೆ: ವರಲಕ್ಷ್ಮಮ್ಮ ರವರ ಜಮೀನಿಗೆ ಹೋಗುವ ದಾರಿ, ಉತ್ತರಕ್ಕೆ: ಬಿ.ಕಾಟೀಹಳ್ಳಿ ಕುಮಾರಸ್ವಾಮಿ ರವರ ಜಮೀನು, ದಕ್ಷಿಣಕ್ಕೆ: ಕಾಲುವೆ. 2) ಹಾಸನ ತಾಲ್ಲೂಕು, ದುದ್ದ ಹೋಬಳಿ, ಕೋರವಂಗಲ ಕಾವಲು ಗ್ರಾಮದ ಸರ್ವೆ ನಂಬರ್ 1/ಪಿ155ರ ವಿಸ್ತೀರ್ಣ 02-00 ಎಕರೆ ವಿಸ್ತೀರ್ಣದ ರೆವಿನ್ಯೂ ಖಾತಾ ಸಂ:621, ಎಂ.ಆರ್.ಸಂ: 31/94-95 ರಂತೆ ಖಾತೆ ಇರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಕಾಲುವೆ, ಪಶ್ಚಿಮಕ್ಕೆ: ಸರ್ವೆ ನಂ.1/ಪಿ154 ರ ಬಿ.ಎಸ್. ಕೆಂಪಲಿಂಗೇಗೌಡ ಅಲಿಯಾಸ್ ಡಿ.ಎಸ್. ರಾಜು ಬಿನ್ ಲೇಟ್ ಡಿ.ಕೆ. ಸಿದ್ದಲಿಂಗೇಗೌಡ, ಉತ್ತರಕ್ಕೆ: ಬಿ.ಕಾಟೀಹಳ್ಳಿ ಕುಮಾರಸ್ವಾಮಿ ರವರ ಜಮೀನು, ದಕ್ಷಿಣಕ್ಕೆ: ಕಾಲುವೆ.

ವಕೀಲರು: ಪಿ.ಎಂ ವಾಸುದೇವ, ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು. ಹಾಸನ, ಮೊ: 9448350289, 8073709826

# ಕೋಡಿಹಳ್ಳಿ ವ್ಯಾಪ್ತಿಯಲ್ಲಿ ನೀರಿಗೆ ಹಾಹಾಕಾರ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಕೋಡಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಡವಹಳ್ಳಿ (ಅಗ್ರಹಾರ ಗೇಟ್) ಗ್ರಾಮಗಳಲ್ಲಿನ ಪರಿಶಿಷ್ಟರ ಕಾಲೋನಿಗಳಲ್ಲಿ ಕುಡಿಯುವ ನೀರು ಸರಬರಾಜಿಲ್ಲದೆ ಜೀವ ಜಲಕ್ಕಾಗಿ ಪರಿತಪಿಸುವಂತಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ಕುರಿತು ಮಾಧ್ಯಮಗಳಲ್ಲಿ ಅವಲತ್ತುಕೊಂಡಿರುವ ನಿವಾಸಿಗರು, ಅಗ್ರಹಾರಗೇಟ್ ಸಮೀಪದ ಪರಿಶಿಷ್ಟ ಜಾತಿ, ವರ್ಗಗಳ ಅಲೆಮಾರಿ ಸಮುದಾಯದ 20 ಕ್ಕೂ ಹೆಚ್ಚು ಕುಟುಂಬಳು ನೆಲೆಸಿವೆ. ಸೋಲಿಗರು, ಸಿಳ್ಳೆಕ್ಯಾತ ಜನಾಂಗದವರೂ ಕಾಲನಿಯಲ್ಲಿ ವಾಸವಿದ್ದಾರೆ.

ವಯೋವೃದ್ದರು, ಮಕ್ಕಳು ಬಹುತೇಕ ಕುಟುಂಬಗಳಲ್ಲಿ ಇದ್ದಾರೆ. ವ್ಯಾಪಾರ, ಕೂಲಿ ಮಾಡಿ ಬದುಕು ನಡೆಸಿವು ಇವರುಗಳು. ಕುಟುಂಬ ನಿರ್ವಹಣೆಯ ಜತೆಗೆ ನೀರು ದೂರದಿಂದ ನೀರು ಹೊತ್ತು ತರುವುದು ಕಷ್ಟಕರವಾಗಿದೆ. ಸಮೀಪದಲ್ಲೆ ಇದ್ದ ಕೊಳವೆ ಬಾವಿ ಬರಿದಾಗಿದೆ. ಹಾಗಾಗಿ ಹನಿ ನೀರಿಗೂ ದೂರದ ಕೊಳವೆ ಬಾವಿಗೆ ತೆರಳಬೇಕಿದೆ.

ಜಲಜೀವನ ಮಿಷನ್ ಯೋಜನೆಯಡಿ ನಳ ನೀರು ಸರಬರಾಜು ಸಂಪರ್ಕ ನೀಡಬೇಕು ಎಂದು ಹಲವು ಬಾರಿ ಬೇಡಿಕೆ ಇಟ್ಟಿದ್ದಾರೆ. ಆದರೆ ಯಾರೊಬ್ಬರೂ ಕಾಳಜಿ ವಹಿಸಿಲ್ಲ. ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಗಮನ ಹರಿಸಲಿ ಎಂದು ಲಿಖಿತವಾಗಿ ತಮ್ಮ ಅಹವಾಲು ನೀಡಿದ್ದಾರೆ.

### ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿ: ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಾಸನ:** ಬಾಲ್ಯವಿವಾಹ ನಿಷೇಧಕ್ಕೆ ಸಂಬಂಧಿಸಿದಂತೆ ಶೂನ್ಯ ಸಹಿಷ್ಣುತೆ ಹೊಂದಿರುವ ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಜಿಲ್ಲೆಯ ಒಂದು ಗ್ರಾಮ ಪಂಚಾಯಿತಿಗೆ ರೂ.25,000 ಗಳಂತೆ ಪ್ರಶಸ್ತಿ ನೀಡಲು ಆದೇಶಿಸಿದ್ದು, 2024-25 ನೇ ಸಾಲಿನ ಬಾಲ್ಯವಿವಾಹ ಶೂನ್ಯ ಸಹಿಷ್ಣುತೆ ಹೊಂದಿರುವ ಗ್ರಾಮ ಪಂಚಾಯಿತಿಗಳಿಗೆ ಪ್ರಶಸ್ತಿ ನೀಡುವ ಸಲುವಾಗಿ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸ್ತಾವನೆಗಳನ್ನು ಸಲ್ಲಿಸಲು ಮೇ 8 ರಂದು ಕೊನೆಯ ದಿನಾಂಕವಾಗಿದ್ದು ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ, ಸಂಪಿಗೆ ರಸ್ತೆ, ಮಸೀದಿ ಹತ್ತಿರ, ಕೆ.ಆರ್. ಪುರಂ, ದೂರವಾಣಿ ಸಂಖ್ಯೆ:08172-231360ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

### ಸರಿಪಡಿಸದಿದ್ದರೆ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ಎಚ್ಚರಿಕೆ

# ವಿದ್ಯುತ್ ಇಲ್ಲದೆ ರೈತರಿಗೆ ಬೆಳೆ ಹಾನಿ ಭೀತಿ

• ಪ್ರಜೋದಯ ವರದಿ




**ಜಾವಗಲ್:** ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟ ದೊಡ್ಡಘಟ್ಟ ಹೊಸೂರು ರೈತರಿಗೆ ನಾಲ್ಕು ದಿನಗಳಿಂದ ಸರಿಯಾಗಿ ವಿದ್ಯುತ್ ನೀಡದೆ ರೈತರು ಹಾಕಿರುವ ಬೆಳೆ ಹಾಳಾಗಿ ಲಕ್ಷಾಂತರ ರೂ. ನಷ್ಟದ ಭೀತಿಯಲ್ಲಿ ರೈತರು ಏಕಾ ಏಕಿ ವಿದ್ಯುತ್ ಇಲಾಖೆಯ ಆವರಣದಲ್ಲಿ ಪ್ರತಿಭಟನೆ ನಡೆಸಿ ಇನ್ನೆರಡು ದಿನದಲ್ಲಿ ಸರಿಪಡಿಸದಿದ್ದರೆ ಕಚೇರಿಗೆ ಬೀಗ ಹಾಕಿ ಪ್ರತಿಭಟಿಸುವುದಾಗಿ ಎಚ್ಚರಿಕೆಯನ್ನೂ ನೀಡಿದ ಘಟನೆ ನಡೆಯಿತು.

ಈ ಸಂದರ್ಭದಲ್ಲಿ ಯುವ ರೈತ ಸುನಿ ಎಂಬುವವರು ಮಾತನಾಡಿ, ಕಳೆದ 1 ತಿಂಗಳಿಂದಲು ಸಂಭಂದಪಟ್ಟ ಇಲಾಖೆ ಅಧಿಕಾರಿ ರಮೇಶ್ ರವರಿಗೆ ಸಾಕಷ್ಟು ಭಾರಿ ಮನವಿ ಮಾಡಿದರು ಸಮಸ್ಯೆ ಬಗೆಹರಿಸದೆ ಕಾಲಾಹರಣ ಮಾಡಿದ್ದು ಒಂದು ವಾರದಿಂದ ವಿದ್ಯುತ್ ಸಮಸ್ಯೆ ಹೆಚ್ಚಾಗಿದೆ ಈಗಾಗಲೇ ರೈತರು ಹತ್ತಿ, ಶುಂಠಿ, ಟಮೋಟೋ, ಬಾಳೆ ಈಗೆ ಅನೇಕ ಬೆಳೆಗಳನ್ನು ಮಾಡಿದ್ದು, ಬೆಳೆ ಉಳಿಸಿಕೊಳ್ಳಲು ಪರದಾಡುವಂತಾಗಿದೆ. ಕೂಡಲೇ ಸರಿಪಡಿಸದಿದ್ದರೆ ಲಕ್ಷಾಂತರ ಬೆಳೆ ನಷ್ಟವಾಗಿ ರೈತರು ಭೀದಿಗೆ ಬೀಳುವ ಪರಿಸ್ಥಿತಿ ನಿರ್ಮಾಣ ಆಗುವ ಆತಂಕ ವ್ಯಕ್ತಪಡಿಸಿದರು.

ರೈತ ದೊಡ್ಡಘಟ್ಟ ದಿನೇಶ್ ಅವರು ಮಾತನಾಡಿ, 20 ಕ್ಕೂ ಹೆಚ್ಚು ತೋಟದ ಮನೆಗಳಿದ್ದು ಒಂದು ವಾರದಿಂದ ಸರಿಯಾಗಿ ವಿದ್ಯುತ್ ಇಲ್ಲದೆ ಕುಡಿಯವ ನೀರಿಗೆ ಸಮಸ್ಯೆ ಆಗಿದೆ ರಾತ್ರಿ ವೇಳೆ ಕಾಡು ಪ್ರಾಣಿಗಳ ಕಾಟ ಮನೆಯಲ್ಲಿರುವ ರೈತ ಕುಟುಂಬಗಳು ಆತಂಕಕ್ಕೆ ಒಳಗಾಗಿವೆ, ಅಲ್ಲದೆ ಎರಡು ಊರಿನ ವಿದ್ಯುತ್ ಲೈನ್‌ಗಳು ಅನೇಕ ಕಡೆ ಜೋತು ಬಿದ್ದಿದ್ದು ಸರಿಪಡಿಸಲು ಲೈನ್ ಮ್ಯಾನ್ ಗೆ ತಿಳಿಸಿದರೆ, ಸಾವಿರಾರು ರೂ. ಲಂಚಕ್ಕೆ ಬೇಡಿಕೆ ಇಡುತ್ತಾರೆಂದು ಇಲಾಖೆಯ ಸಿಬ್ಬಂದಿಗಳ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿದ್ಯುತ್ ಇಲಾಖೆ ಸಿಬ್ಬಂದಿ ಸುಶೀಲ ಅವರಿಗೆ ಸಮಸ್ಯೆಯ ಬಗ್ಗೆ ತಿಳಿಸಿ ಕೂಡಲೇ ವಿದ್ಯುತ್ ಸಮಸ್ಯೆ ಬಗೆಹರಿಸದಿದ್ದರೆ ಇಲಾಖೆಯ ಬಾಗಿಲಿಗೆ ಬೀಗ ಹಾಕಿ ಪ್ರತಿಭಟಿಸುವುದಾಗಿ ಎಚ್ಚರಿಕೆ ನೀಡಿ ಗ್ರಾಮದ ರೈತರು ಮನವಿಪತ್ರ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಗ್ರಾ ಪಂ. ಸದಸ್ಯ ಲಕ್ಷಣ್‌ಗೌಡ, ರಾಜೇಗೌಡ, ರೈತ ಮೋಹನ್, ರಮೇಶ್, ಜಗದೀಶ್, ರಾಕೇಶ್, ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು

# ಕುಡಿಯುವ ನೀರಿಗೆ ಸಮಸ್ಯೆಯಾದರೆ ಡಿಸಿಯೇ ಹೊಣೆ

## ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ: ಮುಂಜಾಗ್ರತೆ ಕೈಗೊಳ್ಳಲು ಸೂಚನೆ

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯದ ಐದು ಜಿಲ್ಲೆಗಳನ್ನು ಹೊರತು ಪಡಿಸಿ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆ ಯಾಗದಂತೆ ಮುಂಜಾಗ್ರತಾ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದರು.

ವಿಧಾನಸೌಧ ಸಭಾಂಗಣದಲ್ಲಿ ಗುರುವಾರ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶ ಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟಂಬರ್ ತಿಂಗಳಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ ಎಂದರು.

ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಜಿಲ್ಲಾಧಿಕಾರಿಗಳೇ ಹೊಣೆಯಾಗುತ್ತಾರೆ. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕೆಂದು ಮುಖ್ಯಮಂತ್ರಿ ಸೂಚಿಸಿದರು. ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡು ಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಿದರು.

**ಅನುದಾನದ ಕೊರತೆಯಿಲ್ಲ**

ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

**22 ಕೊಳವೆ ಬಾವಿಗಳು ಬಾಡಿಗೆಗೆ**

ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆಂದು ಸಭೆಯಲ್ಲಿ ತಿಳಿಸಲಾಯಿತು.

ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿ.ಎಂ.ಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿ.ಎಂ.ಸಿ. ನೀರು ಲಭ್ಯವಿತ್ತು. ಪ್ರಸುತ ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯವಿದೆ. ಮಳೆಗಾಲ ವಿಳಂಬವಾಗಿ ಆರಂಭವಾಗುವ ಸಾಧ್ಯತೆಯಿರುವುದರಿಂದ ಜುಲೈ ಮಧ್ಯದವರೆಗೂ ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆಯನ್ನು ಖಾತ್ರಿ ಪಡಿಸಬೇಕು. ನೀರಾವರಿಗಿಂತ ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಜಲಾಶಯಗಳಲ್ಲಿ ನೀರಿನ ಸೋರಿಕೆಯನ್ನು ಗುರುತಿಸಿ ದುರಸ್ತಿಗೆ ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

**ರಸಗೊಬ್ಬರ ಲಭ್ಯತೆ ಖಾತ್ರಿ**

ಮಧ್ಯಪ್ರಾಚ್ಯದಲ್ಲಿನ ಯುದ್ಧದ ಪರಿಸ್ಥಿತಿಯಿಂದಾಗಿ ಈ ಬಾರಿ ರಸಗೊಬ್ಬರ ಪೂರೈಕೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ವ್ಯಾಪಾರಿಗಳು ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನು ಇರಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ಲಭ್ಯತೆಯನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಬೇಕು. ಯೂರಿಯಾ, ಡಿಎಪಿ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯ ಗಳಿಗೆ ರಸಗೊಬ್ಬರ ಸಾಗಾಟ ಮಾಡುವುದನ್ನು ನಿಯಂತ್ರಿಸಬೇಕೆಂದು ಹೇಳಿದರು.

**ಅಹವಾಲುಗಳಿಗೆ ತುರ್ತಾಗಿ ಸ್ಪಂದಿಸಿ**

ಕುಡಿಯುವ ನೀರಿನ ಕುರಿತಾಗಿ ಸಾರ್ವಜನಿಕರ ಅಹವಾಲುಗಳಿಗೆ ತುರ್ತಾಗಿ ಸ್ಪಂದಿಸಬೇಕು. ಅದಕ್ಕಾಗಿ ತಾಲ್ಲೂಕು ಹಾಗೂ ವಾರ್ಡ್ ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಬೇಕು. ಜಿಲ್ಲಾ ಮಟ್ಟದ ಕಾರ್ಯಪಡೆ ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

**114 ತಾಲ್ಲೂಕುಗಳಲ್ಲಿ ಸಮಸ್ಯೆ**

ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲ್ಲೂಕುಗಳನ್ನು ಹಾಗು 2,410 ಗ್ರಾಮ ಪಂಚಾಯತ್ ಗುರುತಿಸಲಾಗಿದೆ. ಪ್ರಸ್ತುತ 114 ತಾಲ್ಲೂಕುಗಳ 598 ಗ್ರಾಮ ಪಂಚಾಯಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾ ಗಿದ್ದು, ಅದರ ಮೂಲಕ 515 ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು.

---

## ಮಾತುಕತೆ ಆರಂಭವಾಗಿದ್ದರೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ

### ನಾಲ್ಕು ಸಾವು | ಆರು ಜನರಿಗೆ ಗಂಭೀರ ವಾಗಿ ಗಾಯ

• ಪ್ರಜೋದಯ ವರದಿ



**ಬೈರೂತ್:** ಲೆಬನಾನ್ ಮತ್ತು ಇಸ್ರೇಲ್ ನಡುವೆ ನೇರ ರಾಜತಾಂತ್ರಿಕ ಮಾತುಕತೆಗಳು ಆರಂಭವಾಗಿದ್ದರೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮಾಡಿದೆ. ಬುಧವಾರ ತಡರಾತ್ರಿ ನಡೆದ ಘಟನೆಯಲ್ಲಿ ನಾಲ್ವರು ಮೃತಪಟ್ಟು, ಆರು ಜನರಿಗೆ ಗಂಭೀರ ವಾಗಿ ಗಾಯಗೊಂಡಿದ್ದಾರೆ.

ನಬತಿಯಾ ಪ್ರಾಂತ್ಯದಲ್ಲಿರುವ ಹಳ್ಳಿಯೊಂದರ ಮೇಲೆ ಇಸ್ರೇಲ್ ಮೂರು ಬಾರಿ ದಾಳಿ ನಡೆಸಿದೆ. ಗಾಯ ಗೊಂಡವರು ಆರೋಗ್ಯ ಇಲಾಖೆಯ ಕಾರ್ಯಕರ್ತರಾಗಿದ್ದಾರೆಂದು ಲೆಬನಾನ್‌ನ ಮಿಲಿಟರಿ ಅಧಿಕಾರಿಗಳು ತಿಳಿಸಿದ್ದಾರೆ.

ವೈದ್ಯಕೀಯ ತಂಡ ಹಾಗೂ ಆ್ಯಂಬುಲೆನ್ಸ್ ಮೇಲೆ ದಾಳಿ ಮಾಡಿರುವುದನ್ನು ಲೆಬನಾನ್ ಖಂಡಿಸಿದೆ. ಈ ದಾಳಿಗಳ ಕುರಿತಾಗಿ ಪ್ರತಿಕ್ರಿಯೆಗೆ ಇಸ್ರೇಲ್ ಮಿಲಿಟರಿ ತಕ್ಷಣ ಸ್ಪಂದಿ ಸಿಲ್ಲ. ಆದಾಗ್ಯೂ ಆ್ಯಂಬುಲೆನ್ಸ್‌ನಲ್ಲಿ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರು ಇರುವ ಮಾಹಿತಿ ಮೇರೆಗೆ ದಾಳಿ ಮಾಡಲಾಗಿದೆ ಎಂದು ಇಸ್ರೇಲ್ ತಿಳಿಸಿದೆ.

---

## ಆಶ್ರಯ ಮನೆ ಧ್ವಂಸ: 8ನೇ ದಿನವೂ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಆಶ್ರಯ ಯೋಜನೆಯಡಿ ಕಾನೂನು ಬದ್ಧ ಹಕ್ಕುಪತ್ರ ಹೊಂದಿರುವ ಮನೆಗಳನ್ನು ಧ್ವಂಸಗೊಳಿಸಿರುವುದನ್ನು ಖಂಡಿಸಿ, ಸೂಕ್ತ ಪರಿಹಾರ ಹಾಗು ಪುನರ್ವಸತಿ ಒದಗಿಸುವಂತೆ ಆಗ್ರಹಿಸಿ ರೈತ ಸಂಘ ನಡೆಸುತ್ತಿರುವ ಧರಣಿ 8ನೇ ದಿನವೂ ಮುಂದುವರಿಯಿತು.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಮಾತನಾಡಿ, ಬೇಡಿಕೆ ಈಡೇರದಿದ್ದರೆ ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಸಭೆ ಸೇರಿ ಹಾಸನದಿಂದ ವಿಧಾನಸೌಧ ದವರೆಗೆ ಪಾದಯಾತ್ರೆ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಅರಕಲಗೂಡು ತಾಲ್ಲೂಕಿನ ಎಬಿಎಂ ಹಳ್ಳಿ ನಿವಾಸಿಗಳಿಗೆ 1991-92ರಲ್ಲಿ ತಹಶೀಲ್ದಾರ್ ಅವರಿಂದ ಆಶ್ರಯ ಯೋಜನೆ ಅಡಿಯಲ್ಲಿ ಕಾನೂನುಬದ್ಧವಾಗಿ ನಿವೇಶನ ಹಂಚಿಕೆ ಮಾಡಲಾ ಗಿತ್ತು. ಆ ನಿವೇಶನಗಳಲ್ಲಿ ದಶಕಗಳಿಂದ ಮನೆ ನಿರ್ಮಿಸಿಕೊಂಡು ವಾಸವಾಗಿದ್ದರೂ, ಇತ್ತೀಚೆಗೆ ಯಾವುದೇ ಪೂರ್ವ ನೋಟೀಸ್ ನೀಡದೆ ಹಾಗು ಕಾನೂನು ಪ್ರಕ್ರಿಯೆ ಅನುಸರಿಸದೆ ಮನೆಗಳಿಗೆ ಹಾನಿ ಮಾಡಲಾಗಿದೆಂದು ಆರೋಪಿಸಿದರು.

ಜಾಗದ ಸರಿಯಾದ ಅಳತೆ ಹಾಗೂ ಗುರುತು ಪಡಿಸುವ ಕೆಲಸ ಮಾಡದೇ ನಿಜವಾದ ಹಕ್ಕುದಾರರನ್ನು ತೊಂದರೆಗೊಳಿಸಲಾಗುತ್ತಿದೆ. ಅತಿಕ್ರಮಣ ಕಾರರ ವಿರುದ್ಧ ಕ್ರಮ ಕೈಗೊಳ್ಳದೇ ಅವರಿಗೆ ಸಹಕಾರ ನೀಡುತ್ತಿರುವುದು ಅಸಂವಿಧಾನಿಕ ನಡೆ ಎಂದು ಆರೋಪಿಸಿದರು. ರೈತ ಸಂಘದ ಮುಖಂಡರಾದ ಪವಿತ್ರ, ಅಕ್ಮಲ್ ಪಾಷಾ, ವಿಠಲ್ ಸೇರಿ ಹಲವು ರೈತರು ಹಾಗು ಮಹಿಳೆಯರು ಭಾಗವಹಿಸಿದ್ದರು.

---

## ಖಲೀಲ್‌ಗೆ ಗಾಯ: ಐಪಿಎಲ್‌ನಿಂದ ಹೊರಕ್ಕೆ

• ಪ್ರಜೋದಯ ವರದಿ



**ನವದೆಹಲಿ:** ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎಡಗೈ ವೇಗದ ಬೌಲರ್ ಖಲೀಲ್ ಅಹ್ಮದ್ ಅವರು ಪೃಷ್ಠದ ನೋವಿನಿಂದ ಇಂಡಿಯನ್ ಪ್ರೀಮಿಯರ್ ಲೀಗ್‌ನಿಂದ ಹೊರಬಿದ್ದಿದ್ದಾರೆ.

ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಏಪ್ರಿಲ್ 14ರಂದು ನಡೆದ ಪಂದ್ಯದಲ್ಲಿ ಅವರು ಬೆನ್ನಿನ ಕೆಳ ಭಾಗದಲ್ಲಿ ನೋವಿಗೆ ಒಳಗಾಗಿದ್ದರು. ಅವರು ಈ ಟೂರ್ನಿಯಲ್ಲಿ ಚೆನ್ನೈ ಪರ ಉತ್ತಮ ಪ್ರದರ್ಶನ ನೀಡಿ ದ್ದರು. ಹೀಗಾಗಿ ಅವರ ನಿರ್ಗಮನ ತಂಡಕ್ಕೆ ಹಿನ್ನಡೆ ಯಾಗಿದೆ.

ಅವರಿಗೆ ಗ್ರೇಡ್ 2 ಮಟ್ಟದ ನೋವು ಇದೆ. ಅದಕ್ಕೆ 10 ರಿಂದ 12 ವಾರಗಳ ಪುನಶ್ಚೇತನ ಅವಧಿ ಬೇಕಾಗುತ್ತ ದೆಂದು ಐಪಿಎಲ್ ಮೂಲ ತಿಳಿಸಿದೆ.

ಖಲೀಲ್ ಅವರು ಭಾರತ ತಂಡದ ಪರ 11 ಏಕದಿನ, 18 ಟಿ-20 ಪಂದ್ಯಗಳನ್ನು ಆಡಿದ್ದಾರೆ. 2024ರ ಜುಲೈ ನಲ್ಲಿ ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

---

## ಉಕ್ರೇನ್‌ನ ನಾಗರಿಕರನ್ನು ಗುರಿಯಾಗಿಸಿ ರಷ್ಯಾ ದಾಳಿ: 16 ಜನರ ಸಾವು

• ಪ್ರಜೋದಯ ವರದಿ



**ಕೀವ್/ಮಿಡಲ್‌ಬಗ್:** ಉಕ್ರೇನ್‌ನ ನಾಗರಿಕರನ್ನು ಗುರಿಯಾಗಿಸಿ ರಷ್ಯಾವು ರಾತ್ರಿ ಹಗಲು ಎನ್ನದೆ ಸುಮಾರು 700 ಡ್ರೋನ್‌ಗಳನ್ನು, ಹಲವು ಕ್ಷಿಪಣಿಗಳನ್ನು ಬಳಸಿ ಇಡೀ ದಿನ ತೀವ್ರ ದಾಳಿ ನಡೆಸಿದ್ದು, 16 ಮಂದಿ ಮೃತಪಟ್ಟಿದ್ದಾರೆ. 80ಕ್ಕೂ ಅಧಿಕ ಮಂದಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ಗುರುವಾರ ಮಾಹಿತಿ ನೀಡಿದರು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಎರಡು ದಿನಗಳ ಜರ್ಮನಿ, ನಾರ್ವೆ ಮತ್ತು ಇಟಲಿ ಪ್ರವಾಸದಲ್ಲಿ ಇರುವಾಗಲೇ ಈ ದಾಳಿ ನಡೆದಿದೆ. ರಷ್ಯಾದ ಕ್ಷಿಪಣಿಗಳಿಂದ ರಕ್ಷಣೆ ಪಡೆದುಕೊಳ್ಳಲು ಆಧುನಿಕ ವಾಯು ರಕ್ಷಣಾ ವ್ಯವಸ್ಥೆ ಪಡೆದುಕೊಳ್ಳುವ ಸಲುವಾಗಿ ಝೆಲೆನ್‌ಸ್ಕಿ ಅವರು ಈ ಪ್ರವಾಸ ಕೈಗೊಂಡಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಕಾರಣಕ್ಕಾಗಿ ಅಮೆರಿಕವು ರಷ್ಯಾದ ತೈಲ ರಫ್ತಿನ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದೆ. ಈ ಕಾರಣದಿಂದ ರಷ್ಯಾವು ತಮ್ಮ ಮೇಲೆ ದಾಳಿ ಹೆಚ್ಚು ಮಾಡಿದೆ ಎಂದು ಉಕ್ರೇನ್ ಭಯ ವ್ಯಕ್ತಪಡಿಸಿದೆ. ನಾಲ್ಕು ವರ್ಷಗಳ ರಷ್ಯಾದ ದಾಳಿಗಳಲ್ಲಿ 15 ಸಾವಿರಕ್ಕೂ ಅಧಿಕ ನಾಗರಿಕರು ಮೃತಪಟ್ಟಿದ್ದಾರೆ.

**ಝೆಲೆನ್‌ಸ್ಕಿಗೆ ಪ್ರಶಸ್ತಿ**

ಕಳೆದ ನಾಲ್ಕು ವರ್ಷಗಳಿಂದ ರಷ್ಯಾ ನಿರಂತರವಾಗಿ ನಡೆಸುತ್ತಿರುವ ದಾಳಿಗಳನ್ನು ಉಕ್ರೇನ್ ಜನತೆ ಧೈರ್ಯದಿಂದ ಎದುರಿಸುತ್ತಿದ್ದಾರೆ. ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಕೂಡ ದೇಶ ದೊಂದಿಗೆ ನಿಂತುಕೊಂಡು, ಎದೆಗಾರಿಕೆ ತೋರಿಸುತ್ತಿದ್ದಾರೆ. ಈ ಕಾರಣದಿಂದ ಅವರಿಗೆ ಪ್ರತಿಷ್ಠಿತ ಇಂಟರ್ ನ್ಯಾಷನಲ್ ಫೋರ್ ಫ್ರೀಡಮ್ಸ್ ಪ್ರಶಸ್ತಿ ನೀಡುತ್ತಿದ್ದೇ ವೆಂದು ರೂಸ್ ವೆಲ್ಟ್ ಫೌಂಡೇಷನ್ ಹೇಳಿದೆ.

---

# ಮುಂದುವರಿದ ಅಂಬೇಡ್ಕರ್ ಭವನ ಕಾಮಗಾರಿ: ಎ.ಮಂಜು

• ಪ್ರಜೋದಯ ವರದಿ



**ಅರಕಲಗೂಡು:** ಪಟ್ಟಣದಲ್ಲಿ ನೆನ ಗುದಿಗೆ ಬಿದ್ದಿದ್ದ ಹೈಟೆಕ್ ಅಂಬೇಡ್ಕರ್ ಭವನದ ಮುಂದು ವರಿದ ಕಾಮಗಾರಿಯನ್ನು 3.50 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಇಡೀ ಜಿಲ್ಲೆ ಯಲ್ಲಿಯೇ ಸರ್ವಜನರನ್ನು ಕೈಬೀಸಿ ಕರೆಯುವ ಭವನ ಇದಾಗಲಿದೆ ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.

ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ 8 ವರ್ಷಗಳ ಹಿಂದೆ ಪಟ್ಟಣದ ಹೃದಯ ಭಾಗದಲ್ಲಿನ ಹಳೆಯ ಭವನವನ್ನು ನೆಲಸಮಗೊಳಿಸಿ 1.50 ಕೋಟಿ ರೂ. ವೆಚ್ಚದಲ್ಲಿ ನಾನು ಶಾಸಕ, ಸಚಿವನಾಗಿದ್ದ ವೇಳೆ ಶಂಕುಸ್ಥಾಪನೆ ನೆರವೇರಿಸಿದ್ದೆ. ನಂತರದ ಚುನಾವಣೆಯಲ್ಲಿ ನಾನು ಸೋಲನ್ನು ಕಾಣಬೇಕಾಯಿತು. ಹಿಂದಿನ ಅವಧಿಯಲ್ಲಿ ಶಾಸಕರಾಗಿದ್ದವರು ಭವನದ ಕಾಮಗಾರಿ ಪೂರ್ಣಗೊಳಿಸಲು ಮುಂದಾಗಿಲ್ಲ. ಅದೇ ರೀತಿ ನನ್ನ ಅವಧಿ ಯಲ್ಲಿಯೇ ತಾಲ್ಲೂಕು ಕಚೇರಿ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡಿದ್ದೆ. ಅಲ್ಲಿಯೂ ಕೂಡ ಗೋಪುರ ನಿರ್ಮಿಸುವ ಕೆಲಸ ಆಗಿರಲಿಲ್ಲ. ಹಾಗಾಗಿ ಈ ಎರಡು ಕಾಮಗಾರಿ ನೆನ ಗುದಿಗೆ ಬೀಳಲು ಕಾರಣವಾಯಿತು. ಪುನಃ ನಾನೇ ಶಾಸಕನಾದ ಮೇಲೆ ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದ ಪರಿಣಾಮ ಹಣ ಬಿಡುಗಡೆ ಯಾಗಿದೆ. ನಾನೇ ಆರಂಭಿಸಿದ ಕೆಲಸ ನನ್ನ ಅವಧಿಯಲ್ಲಿ ಪೂರ್ಣಗೊಳಿಸುವ ಅವಕಾಶ ದೊರೆತಿದೆ ಎಂದು ಹೇಳಿದರು.

ಕಳೆದ ಆರು ತಿಂಗಳ ಅವಧಿಯಲ್ಲಿ ನೆನಗುದಿಗೆ ಬಿದ್ದಿದ್ದ ಅಂಬೇಡ್ಕರ್ ಗೋಪುರ ಕಾಮಗಾರಿ ಯನ್ನು ಮೈಸೂರು ಅರಸರ ಗೋಪುರ ಮಾದರಿಯಲ್ಲಿ ನಿರ್ಮಿಸಿ ಅಂಬೇಡ್ಕರ್ ಜಯಂತಿ ಯಂದು ಲೋಕಾರ್ಪಣೆಗೊಳಿದ್ದೇನೆ. ಅದೇ ರೀತಿ ಅಂಬೇಡ್ಕರ್ ಭವನ ಕಾಮಗಾರಿಯನ್ನು ಸಹ ಆರು ತಿಂಗಳೊಳಗೆ ಆಧುನಿಕ ಶೈಲಿಯಲ್ಲಿ ಕೆಲಸ ಮುಗಿಸಿ ಸರ್ವ ಪಕ್ಷಗಳ ಮುಖಂಡರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಸಹಸ್ತಾರು ಸಂಖ್ಯೆಯ ಅಂಬೇಡ್ಕರ್ ಅಭಿಮಾನಿಗಳ ಸಮ್ಮುಖ ದಲ್ಲಿ ಭವನ ಉದ್ಘಾಟಿಸುವ ಮಹಾ ದಾಸೆಯನ್ನು ಹೊಂದಲಾಗಿದೆ ಎಂದರು.

ಒಟ್ಟು 3.50 ಕೋಟಿ ರೂ. ವೆಚ್ಚದಲ್ಲಿ ಬಾಕಿ ಉಳಿದಿರುವ ಅಂಬೇಡ್ಕರ್ ಭವನ ಕಾಮಗಾರಿ ನಡೆಯಲಿದೆ. ಈಗಾಗಲೇ ಸರ್ಕಾರ 1.50 ಕೋಟಿ ರೂ. ಬಿಡುಗಡೆ ಮಾಡಿದ್ದು, ಹೆಚ್ಚುವರಿಯಾಗಿ 2 ಕೋಟಿ ರೂ. ನೀಡುವ ಭರವಸೆಯನ್ನು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರು ನೀಡಿದ್ದಾರೆ. ಅದಲ್ಲದೇ ನಾನು ವೈಕ್ತಿಕವಾಗಿಯೂ ಹಣ ವಿನಿಯೋಗಿಸುವ ಒತ್ತಾಸೆ ಯನ್ನು ಹೊಂದಿದ್ದೇನೆ. ಅಂಬೇಡ್ಕರ್ ಆಶಯದಂತೆ ನೂತನ ಭವನ ಎಲ್ಲಾ ಸಮಾಜದವರ ಕಲ್ಯಾಣ ಕಾರ್ಯಗಳಿಗೆ ಆಸರೆಯಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದರು.

ರಾಜಕೀಯ ಪ್ರೇರಿತವಾಗಿ ನನ್ನ ದಲಿತಪರ ಕಾರ್ಯಗಳನ್ನು ಸಹಿಸದೇ ಕೆಲವರು ಟೀಕೆಗಳನ್ನು ಮಾಡುತ್ತಾರೆ. ಅದಕ್ಕೆ ನಾನು ಕಿವಿಗೊಡೊದಿಲ್ಲ. ನಾನು ಬೆಳೆದು ಬಂದಿರುವ ರೀತಿ, ನನ್ನ ಒಡನಾಟ ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ನಡೆಯಲು ಹೆಜ್ಜೆ ಇಟ್ಟಿದ್ದೇನೆ. ಇಡೀ ರಾಜ್ಯದಲ್ಲಿ 224 ಮಂದಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಇದ್ದಾರೆ. ಅದ ರಲ್ಲಿ ದಲಿತ ಸಮುದಾಯ, ಹಿಂದುಳಿದ ವರ್ಗಗಳಿಗೆ ಸೇರಿರುವವರು ಇದ್ದಾರೆ. ದಲಿತರ ಮನೆಯಲ್ಲಿ ವಾಸ್ತವ್ಯ ಹೂಡುವುದನ್ನು ಕಂಡಿಲ್ಲ. ನಾನು ಕಳೆದ ಐದು ವರ್ಷಗ ಳಿಂದಲೂ ಈ ಮಹಾನ್ ಕಾರ್ಯ ವನ್ನು ಕೈಗೊಂಡು ಸಮಾಜ ಪರಿವರ್ತನೆಗೆ ಅರಿವು ಮೂಡಿಸುತ್ತಿದ್ದೇನೆ. ನಾನು ಸೋತಾಗಲು ಕೂಡ ಈ ಕೆಲಸ ಕೈಗೊಂಡಿದ್ದೇನೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಮುಖಂಡರಾದ ಹೊನ್ನವಳ್ಳಿ ಸತೀಶ್, ಕೃಷ್ಣಯ್ಯ, ರಶ್ಮಿಮಂಜುನಾಥ್, ಡಿ.ರಾಮು, ಜೈಬೀಮ್ ನಗರ ಮಂಜು, ಅನಿಕೇತನ್, ಮಂಜು ಶೆಟ್ಟಿಗೌಡ, ಅಧಿಕಾರಿಗಳಾದ ರವಿಕುಮಾರ್, ಡಾ.ಪುಷ್ಪಲತಾ, ಧನಲಕ್ಷ್ಮೀ ಇತರರು ಇದ್ದರು.

---

# ರಾಜಕೀಯದಾಚೆಗೂ ಜಿಲ್ಲೆ ಕಲೆ-ಸಂಸ್ಕೃತಿ ಸಾಬೀತು

## ಶಿವಾನಂದ ತಗಡೂರು ಅಭಿಮತ: ಕಾಲೇಜು ರಂಗ ನಾಟಕ ಪ್ರದರ್ಶನ ಸಂಪನ್ನ

• ಪ್ರಜೋದಯ ವರದಿ



**ಹಾಸನ:** ರಾಜಕೀಯದಾಚೆಗೂ ಜಿಲ್ಲೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ತನ್ನದೇ ಗುರುತು ಹೊಂದಿದೆ ಎಂಬುದನ್ನು ನಾಟಕೋತ್ಸವ ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ 3 ದಿನಗಳ ಕಾಲ ನಡೆದ ಕಾಲೇಜು ರಂಗ ನಾಟಕ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಯುವ ಪ್ರತಿಭೆಗಳು ರಂಗಭೂಮಿಯಲ್ಲಿ ತೋರಿದ ಶ್ರಮ ಮತ್ತು ಸಮರ್ಪಣೆ ಶ್ಲಾಘನೀಯ. 3 ದಿನಗಳಿಂದ ಪ್ರದರ್ಶನಗೊಂಡ ನಾಟಕಗಳು ರಂಗಭೂಮಿಯ ವೈಭವವನ್ನು ಮತ್ತೆ ನೆನಪಿಸಿವೆ ಎಂದರು.

ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಮಾತನಾಡಿ, ಇಂತಹ ನಾಟಕೋತ್ಸವ ಯುವಕರಲ್ಲಿ ಸಾಂಸ್ಕೃತಿಕ ಚಟುವಟಿಕೆ ಬಗ್ಗೆ ಆಸಕ್ತಿ ಹೆಚ್ಚಿಸುವುದರ ಜೊತೆಗೆ ರಂಗಭೂಮಿ ಪುನರುಜ್ಜೀವನಕ್ಕೆ ಕಾರಣವಾ ಗುತ್ತವೆ ಎಂದರು. ಇದೇ ವೇಳೆ ತಾವು ಹಿಂದೆ ಅನೇಕ ಸಲ ಇದೇ ಕಲಾಭವನದಲ್ಲಿ ನಾಟಕ ಪ್ರದರ್ಶನ ಆಯೋಜನೆ ಮಾಡಿದ್ದನ್ನು ಮೆಲುಕು ಹಾಕಿದರು. ಸಂಗ್ಯಾಬಾಳ್ಯ ಎನ್ನುವ ನಾಟಕ ಇಂದಿಗೂ ಕೂಡ ಈ ವೇದಿಕೆ ಮೇಲೆ ನೆನಪಾಗು ತ್ತದೆ. ಆ ನಾಟಕದಲ್ಲಿ ಅಭಿನಯ ಮಾಡಿದ ಅನೇಕ ಪಾತ್ರಧಾರಿಗಳು ಇಲ್ಲಿದ್ದಾರೆ. ಕಲಾಭವನ ವೇದಿಕೆ ಅನೇಕ ಪ್ರತಿಭೆಗಳನ್ನು ಹೊರ ತಂದಿದೆ ಎಂದು ಹೇಳಿದರು.

ಹಿರಿಯ ಕಲಾವಿದ ಗುಂಡಣ್ಣ ಅವರು ಜಿಲ್ಲೆಯಲ್ಲಿ ರಂಗಭೂಮಿಗೆ ಬೇಕಾದಷ್ಟು ಪ್ರೋತ್ಸಾಹ ಸಿಗುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿ, ಯುವಕರು ರಂಗಭೂಮಿಯತ್ತ ಹೆಚ್ಚು ಗಮನ ಹರಿಸಿ, ಅದನ್ನು ಇನ್ನಷ್ಟು ಬಲಪಡಿಸಬೇಕು. ಶಿಕ್ಷಣದ ಜೊತೆಗೆ ಕಲೆ ಮತ್ತು ಸಂಸ್ಕೃತಿ ಕೂಡ ವ್ಯಕ್ತಿತ್ವ ವಿಕಾಸಕ್ಕೆ ಅತೀ ಮುಖ್ಯವೆಂದು ಹೇಳಿದರು.

**ನಾಟಕಕ್ಕೆ ಪ್ರೇಕ್ಷಕರಿಂದ ಭರ್ಜರಿ ಪ್ರತಿಕ್ರಿಯೆ**

ನನ್ನ ಅಂಬೇಡ್ಕರ್ ನಾಟಕಕ್ಕೆ ಪ್ರೇಕ್ಷಕರಿಂದ ಭರ್ಜರಿ ಪ್ರತಿಕ್ರಿಯೆ ಸಿಕ್ಕಿತು. ಕೋಟಿಗಾನಹಳ್ಳಿ ರಾಮಯ್ಯ ಅವರ ಸಾಹಿತ್ಯ ಮತ್ತು ಬಾಬಾ ಸಾಹೇಬ್ ಕಾಂಬಳೆ ಅವರ ಸಂಗೀತ ನಿರ್ದೇಶನ ನಾಟಕಕ್ಕೆ ವಿಶೇಷ ಮೆರಗು ನೀಡಿತು. ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಸಮಾಜ ಪರಿವರ್ತನೆಗೆ ಅವರ ಕೊಡುಗೆಗಳನ್ನು ಪರಿಣಾಮಕಾರಿ ಯಾಗಿ ಚಿತ್ರಿಸಿದ ಈ ನಾಟಕ ಪ್ರೇಕ್ಷಕರ ಮನದಲ್ಲಿ ಆಳವಾದ ಪ್ರಭಾವ ಬೀರಿತು.

ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರು ಲೋಕಾಯುಕ್ತರು ಬರುತ್ತಾರೆಂಬ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ವಿದೇಶಿ ಕೃತಿ ಆಧಾರಿತ ಈ ನಾಟಕ, ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಹಾಸ್ಯಮಯವಾಗಿ ಮತ್ತು ಚಿಂತನೆಗೆ ಪ್ರೇರೇಪಿ ಸುವ ರೀತಿಯಲ್ಲಿ ನಿರೂಪಿಸಿತು. ಇದೇ ರೀತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಗಳು ಅಭಿನಯಿಸಿದ ಸರಸತಿಯಾಗಲೊಲ್ಲೆ ನಾಟಕ, ಕೊನೆಯ ದಿನ ಸೆಂಟ್ರಲ್ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿಗಳು ಪತ್ರಕರ್ತ ಜಿ. ಪ್ರಕಾಶ್ ಅವರ ಕಾದಂಬರಿ ಆಧರಿಸಿದ ನನ್ಸಿರಿ ನಾಟಕವನ್ನು ವೇದಿಕೆಗೆ ತಂದರು. ಒಟ್ಟಿನಲ್ಲಿ ನಾಟಕೋತ್ಸವ ಕಲಾಭಿಮಾನಿಗಳನ್ನು ಸೆಳೆಯು ವಲ್ಲಿ ಯಶಸ್ವಿಯಾಯಿತು.

**ಕಲಾಭಿಮಾನಿಗಳ ಅಪಾರ ಮೆಚ್ಚುಗೆ**

ನಾಟ್ಯ ವೈಭವ, ರಂಗಸಿರಿ, ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಂಯು ಕ್ತಾಶ್ರಯದಲ್ಲಿ ಆಯೋಜಿಸಲಾದ ನಾಟ್ಯ ವೈಭವ -ಕಾಲೇಜು ರಂಗ ಕಲಾಭಿಮಾನಿಗಳ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಮೂರು ದಿನಗಳ ಕಾಲ ನಡೆದ ಕಾಲೇಜು ರಂಗ ನಾಟಕ ಪ್ರದರ್ಶನ ಯಶಸ್ವಿಯಾಗಿ ಸಂಪನ್ನಗೊಂಡಿತು.

ನಾಟಕೋತ್ಸವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಕಲಾತ್ಮಕ ಪ್ರತಿಭೆ ಅನಾವ ರಣಗೊಳಿಸಿದರು. ಪ್ರತಿದಿನವೂ ವಿಭಿನ್ನ ಕಥಾ ಹಂದರಗಳೊಂದಿಗೆ ಪ್ರೇಕ್ಷಕರ ಮನ ಗೆಲ್ಲುವ ನಾಟಕ ಪ್ರದರ್ಶನಗೊಂಡವು.

ಪ್ರತಿದಿನ ಕಲಾಕ್ಷೇತ್ರ ತುಂಬಿ ತುಳುಕುತ್ತಿತ್ತು. ವಿದ್ಯಾರ್ಥಿಗಳ ಅಭಿನಯ, ನಿರ್ದೇಶನ ಹಾಗು ತಾಂತ್ರಿಕ ನಿರ್ವಹಣೆ ಎಲ್ಲವೂ ಪ್ರಶಂಸೆಗೆ ಪಾತ್ರವಾಯಿತು. ನಿರ್ದೇಶಕ ಧನಂಜಯ ದಿಯಾನ್, ಹಿರಿಯ ಕಲಾವಿದ ಗುಂಡಣ್ಣ, ಮೇಕಪ್ ಹನುಮಂತಣ್ಣ, ಪಿ.ಶಾಡ್ರಾಕ್, ಜಿ.ಪ್ರಕಾಶ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಸನ ಲೋಕಾ ಯುಕ್ತ ಎಸ್‌ಪಿ ಡಾ.ಬಿ.ಎನ್. ನಂದಿನಿ, ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್, ಸೆಂಟ್ರಲ್ ಕಾಮರ್ಸ್ ಕಾಲೇಜಿನ ಅಧ್ಯಕ್ಷೆಪರಿಮಳ ಮಹೇಶ್, ಪ್ರಾಂಶುಪಾಲ ಚಂದ್ರ ಕಾಂತ ಪಡೆಸೂರು ಮೊದಲಾದವರಿದ್ದರು.

---

## ಕ್ಷೇತ್ರ ಪುನರ್ ವಿಂಗಡಣೆ ವಿರುದ್ಧ ವಿಪಕ್ಷಗಳು ಒಗ್ಗಟ್ಟಾಗಿವೆ: ಮಲ್ಲಿಕಾರ್ಜುನ ಖರ್ಗೆ



• ಪ್ರಜೋದಯ ವರದಿ

**ನವದೆಹಲಿ:** ಕ್ಷೇತ್ರ ಪುನರ್ ವಿಂಗಡಣೆ ವಿರುದ್ಧ ವಿರೋಧ ಪಕ್ಷಗಳು ಒಗ್ಗಟ್ಟಾಗಿವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗುರುವಾರ ಹೇಳಿದರು.

ಮಹಿಳಾ ಮೀಸಲಾತಿ ಹೆಸರಿನಲ್ಲಿ ಜಾರಿಗೆ ತರಲು ಹೊರಟಿರುವ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗೆ ನಮ್ಮ ವಿರೋಧವಿದೆ. ಮಸೂದೆ ಹೆಸರಿನಲ್ಲಿ ಸಂಸತ್ತನ್ನು ಹೈಜಾಕ್ ಮಾಡಲು ವಿರೋಧ ಪಕ್ಷಗಳು ಬಿಡುವುದಿಲ್ಲ. ನಾವು ಒಗ್ಗಟ್ಟಾಗಿ ನಿಲ್ಲುತ್ತೇವೆ ಮತ್ತು ನಮ್ಮ ಪ್ರಜಾಪ್ರಭುತ್ವದ ಮೇಲಿನ ಈ ಕುಟಿಲ ದಾಳಿಯನ್ನು ಪೂರ್ಣ ಬಲದಿಂದ ಎದುರಿಸಲಿದ್ದೇವೆಂದು ಬರೆದುಕೊಂಡಿದ್ದಾರೆ.

ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಗುರುವಾರ ಮಂಡಿಸಲಾಯಿತು. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿರುವ ವಿರೋಧ ಪಕ್ಷಗಳು, ಐದು ರಾಜ್ಯಗಳ ಚುನಾವಣೆಯ ಹೊತ್ತಿನಲ್ಲಿ ತರಾತುರಿಯಲ್ಲಿ ಜಾರಿ ಮಾಡಲು ಹೊರಟಿರುವ ಸರ್ಕಾರದ ನಡೆಯನ್ನು ಪಶ್ನಿಸಿವೆ.

ಈ ಹಿಂದೆ 2027ರಲ್ಲಿ ನಡೆಯಲಿರುವ ಜನಗಣತಿ ಆಧಾರದಲ್ಲಿ ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ನಡೆಸಲಾಗುವುದೆಂದು ಕೇಂದ್ರ ಸರ್ಕಾರ ಹೇಳಿತ್ತು. ಈಗ 2011ರ ಜನಗಣತಿಯ ದತ್ತಾಂಶದ ಮೇಲೆ ಪುನರ್ ವಿಂಗಡಣೆ ಮಾಡಲು ಹೊರಟಿದೆ. ಅದಕ್ಕಾಗಿ ಇಂದು ವಿಶೇಷ ಅಧಿವೇಶನ ಕರೆದಿದೆ.

---

## ಅಂಬೇಡ್ಕರ್ ಪ್ರಶಸ್ತಿ ಪಡೆದ ಅಣ್ಣಯ್ಯಗೆ ಸನ್ಮಾನ

• ಪ್ರಜೋದಯ ವರದಿ



**ಸಕಲೇಶಪುರ:** ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಅಣ್ಣಯ್ಯ ಹೆತ್ತೂರು ಅವರಿಗೆ ಸರ್ಕಾರದ ಅತ್ಯುನ್ನತ ಗೌರವಗಳಲ್ಲಿ ಒಂದಾದ ಡಾ.ಬಿ.ಆರ್.ಅಂಬೇಡ್ಕರ್ ರಾಜ್ಯ ಪ್ರಶಸ್ತಿ ಲಭಿಸಿರುವುದು ಇಡೀ ತಾಲ್ಲೂಕಿಗೆ ಹೆಮ್ಮೆಯ ವಿಷಯವೆಂದು ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಹೆತ್ತೂರಿನಲ್ಲಿರುವ ಅಣ್ಣಯ್ಯ ಹೆತ್ತೂರು ಅವರ ನಿವಾಸಕ್ಕೆ ಭೇಟಿ ನೀಡಿ ಸನ್ಮಾನಿಸಿ ಮಾತನಾಡಿದ ಅವರು, ಅಣ್ಣಯ್ಯ ಅವರು ತಮ್ಮ ಕುಟುಂಬಕ್ಕಿಂತಲೂ ಹೆಚ್ಚಾಗಿ ಸಮಾಜದ ಹಿತಕ್ಕಾಗಿ ಬದುಕನ್ನು ಮೀಸಲಿಟ್ಟವರು. ಶಾಲಾ ದಿನಗಳಿಂದಲೇ ದಲಿತ ಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಶೋಷಿತ ವರ್ಗಗಳ ಧ್ವನಿಯಾಗಿ ಅನೇಕ ಹೋರಾಟಗಳನ್ನು ಯಶಸ್ವಿಯಾಗಿ ಸಂಘಟಿಸಿರುವ ಅಣ್ಣಯ್ಯ ಅವರ ಸೇವೆಯನ್ನು ಸ್ಮರಿಸಿದರು. ಸಮಾಜದ ಏಳಿಗೆ ಗಾಗಿ ಹಗಲಿರುಳು ಶ್ರಮಿಸಿದ ಇಂತಹ ವ್ಯಕ್ತಿಯ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಸರ್ಕಾರ ಪ್ರಶಸ್ತಿ ನೀಡಿರುವುದು ಅತ್ಯಂತ ಸ್ತುತ್ಯಾರ್ಹ ಹಾಗೂ ಅಭಿನಂದನಾರ್ಹವಾಗಿದೆ ಎಂದರು.

ತಳಮಟ್ಟದ ಹೋರಾಟಗಾರನಿಗೆ ದೊರೆತ ಈ ಗೌರವವು ಇಂದಿನ ಯುವ ಪೀಳಿಗೆಗೆ ಸಾಮಾಜಿಕ ಕಳಕಳಿಯೊಂದಿಗೆ ಕೆಲಸ ಮಾಡಲು ಪ್ರೇರಣೆಯಾಗಲಿದೆ. ಮುಂದಿನ ದಿನಗಳಲ್ಲಿಯೂ ಅಣ್ಣಯ್ಯ ಅವರು ಇನ್ನಷ್ಟು ಸಮಾಜಮುಖಿ ಸೇವಾ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳಲಿ ಎಂದು ಶುಭ ಹಾರೈಸಿದರು.

ಹೆತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗಭೂಷಣ್, ಜೆಡಿಎಸ್ ಮುಖಂಡರಾದ ಸುದರ್ಶನ್ ಹಾಡ್ಯ, ದಿವಾಕರ್ ಹೆತ್ತೂರು, ಮುರುಳಿ ಹೆತ್ತೂರು, ಸಂಘದ ನಿರ್ದೇಶಕರಾದ ಮಲ್ಲೇಶ್ ಕಿರ್ಕಳ್ಳಿ, ರವಿಕುಮಾರ್ ಹೆತ್ತೂರು, ಸುಮನ್ ಹೆತ್ತೂರು, ದಲಿತ ಮುಖಂಡರಾದ ವೀರೇಶ್ ವಳಹಳ್ಳಿ, ಹೂವಣ್ಣ ಹಾಜರಿದ್ದರು.

---

**ಸೈಬರ್ ದಾಳಿ ಮೂಲಕ ಪುಟಿದೆದ್ದ ಇರಾನ್**

# ಕುಗ್ಗಿರಬಹುದ ಆದರೆ ಸೋತಿಲ್ಲ

• ಪ್ರಜೋದಯ ವರದಿ



**ಟೆಹರಾನ್:** ಅಮೇರಿಕಾ ಹಾಗೂ ಇಸ್ರೇಲ್ ವಿರುದ್ಧದ ಯುದ್ಧದಿಂದ ಇರಾನ್ ಕೊಂಚ ಕುಗ್ಗಿದೆ. ಆದರೆ, ಸಂಪೂರ್ಣ ನಾಶವಾಗಿಲ್ಲ. ಇರಾನ್ ಪರಮಾಣು ಕೇಂದ್ರಗಳು ಮತ್ತು ಸೇನೆಯನ್ನು ಗುರಿಯಾಗಿಸಿಕೊಂಡು ಅಮೇರಿಕಾ ಮತ್ತು ಇಸ್ರೇಲ್ ತೀವ್ರ ದಾಳಿ ನಡೆಸಿವೆ.

ಶಸ್ತ್ರಾಸ್ತ್ರ ಉತ್ಪಾದನೆ ಮತ್ತು ಸಾರಿಗೆ ವ್ಯವಸ್ಥೆ ಮೇಲೂ ದಾಳಿ ನಡೆದಿದೆ. ಆದರೂ ಇಸ್ಲಾಮಿಕ್ ರಾಷ್ಟ್ರವು ಕಳೆದ ಐದು ದಶಕಗಳಲ್ಲಿ ನಿರ್ಮಿಸಿರುವ ಗಣನೀಯ ಪ್ರಮಾಣದ ಶಸ್ತ್ರಾಸ್ತ್ರ ಶಕ್ತಿಯನ್ನು ಇನ್ನೂ ಹೊಂದಿದೆ.

ಇರಾನ್ ಮಿಲಿಟರಿಯಲ್ಲಿ ಎರಡು ವಿಭಾಗಗಳಿವೆ. ಒಂದು ಸಾಮಾನ್ಯ ಮಿಲಿಟರಿ ಅಥವಾ ಅರ್ಟೇಶ್, ಮತ್ತೊಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್. ಅರ್ಟೇಶ್ ಪ್ರಾದೇಶಿಕ ಭದ್ರತೆ ಬಗ್ಗೆ ಗಮನ ಹರಿಸಿದರೆ, ರೆವಲ್ಯೂಷನರಿ ಗಾರ್ಡ್ಸ್ ವೃತ್ತಿಪರ ಮಿಲಿಟರಿ ಪಡೆಯಾಗಿದ್ದು, ಬಾಹ್ಯ ಆತಂಕಗಳ ವಿರುದ್ಧ ಹೋರಾಡುತ್ತದೆ.

2003ರ ಅಮೇರಿಕಾ-ಇರಾಕ್ ಯುದ್ಧದ ಸಮಯದಲ್ಲಿ ಅಮೇರಿಕಾದ ಪಡೆಗಳನ್ನು ಗುರಿಯಾಗಿಸಿಕೊಂಡಿದ್ದ ದಂಗೆಕೋರರಿಗೆ ಸುಧಾರಿತ ಸ್ಫೋಟಕ ಸಾಧನಗಳನ್ನು ಇರಾನ್ ಒದಗಿಸುವ ಮೂಲಕ ಕ್ರಾಂತಿಕಾರಿ ಗಾರ್ಡ್ ಪ್ರಮುಖ ಪಾತ್ರ ವಹಿಸಿತ್ತು. ಕಳೆದ ಕೆಲವು ದಶಕಗಳಲ್ಲಿ ತನ್ನ ಗಡಿಗಳನ್ನು ಮೀರಿ ಮಿಲಿಟರಿ ಪ್ರಭಾವ ಬೀರುವುದನ್ನು ಕಲಿತಿದೆ. ಆ ತಂತ್ರಗಳಲ್ಲಿ ಒಂದು ಸೈಬರ್ ಯುದ್ಧ. ಅದಕ್ಕೆ ತುಲನಾತ್ಮಕವಾಗಿ ಕಡಿಮೆ ವೆಚ್ಚ ತಗಲುವ ಜೊತೆಗೆಪರಿಣಾಮಕಾರಿಯೂ ಆಗಿದೆ. ಸೈಬರ್ ಯುದ್ಧದಲ್ಲಿ ಅವರ ಗುರಿ ಪಾಶ್ಚಿಮಾತ್ಯ ಮಿಲಿಟರಿ ಮತ್ತು ಸರ್ಕಾರಿ ಜಾಲಗಳಾಗಿವೆ.

ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್ ಅವರ ವೈಯಕ್ತಿಕ ಇಮೇಲ್‌ಗಳು ಇತ್ತೀಚೆಗೆ ಆನ್‌ಲೈನ್‌ನಲ್ಲಿ ಸೋರಿಕೆಯಾಗಿದ್ದವು. ಇರಾನ್ ಬೆಂಬಲಿತ ಹ್ಯಾಕರ್‌ಗಳು ಅಮೇರಿಕಾದ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕಗಳು ಮತ್ತು ವಿದ್ಯುತ್ ಗ್ರಿಡ್‌ಗಳು ಸೇರಿ ಮೂಲಸೌಕರ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದರು.

ಅಗ್ನಿಶಕ್ತಿಯ ವಿಚಾರಕ್ಕೆ ಬಂದಾಗ, ಅಮೇರಿಕಾ ಆಪರೇಷನ್ ಎಪಿಕ್ ಫ್ಯೂರಿ ಆರಂಭಿಸುವ ಮುನ್ನ ಇರಾನ್ ಬಳಿ ಸುಮಾರು 3,000 ಬ್ಯಾಲಿಸ್ಟಿಕ್ ಕ್ಷಿಪಣಿಗಳು ಹಾಗೂ ದಶಲಕ್ಷಾಂತರ ಡ್ರೋನ್ ದಾಳಿ ಇದ್ದವೆಂದು ಅಂದಾಜಿಸಲಾಗಿತ್ತು.

ಯುದ್ಧ ಸಾಮಗ್ರಿಗಳ ವಿಷಯಕ್ಕೆ ಬಂದರೆ ಅಮೇರಿಕಾದ ದಾಳಿಗೂ ಮುನ್ನ ಇರಾನ್ 3,000 ಖಂಡಾಂತರ ಕ್ಷಿಪಣಿ ಮತ್ತು ಹತ್ತಾರು ಸಾವಿರು ಏಕಮಾರ್ಗ ಡ್ರೋನ್‌ಗಳನ್ನು ಹೊಂದಿತ್ತು. ಹೆಚ್ಚಿನ ಆಧುನಿಕ ಇರಾನಿನ ಮಿಲಿಟರಿ ಉಪಕರ ಣಗಳು ರಿವರ್ಸ್ ಇಂಜಿನೀ ಯರಿಂಗ್‌ನ ಅಮೇ ರಿಕಾ ಮತ್ತು ಸೋವಿಯತ್ ಉಪಕರಣಗಳನ್ನು ಒಳಗೊಂಡಿರುತ್ತವೆಂದು ಹೇಳಲಾಗುತ್ತದೆ. ಆದರೂ, 1990ರಿಂದ ದೇಶೀಯ ಉತ್ಪಾದನೆ ಮತ್ತು ಉತ್ತರ ಕೊರಿಯಾ ಸೇರಿ ಇತರೆ ದೇಶಗ ಳಿಂದ ಪರಿಣತಿಯನ್ನು ಆಮದು ಮಾಡಿಕೊಳ್ಳುವುದರ ಪರಿಣಾಮ ಇರಾನಿನ ಕ್ಷಿಪಣಿ ತಂತ್ರ ಜ್ಞಾನವು ಗಣನೀಯವಾಗಿ ಸುಧಾರಿಸಿದೆ.

1990ರ ಆರಂಭದಿಂದಲೂ ಇರಾನ್ ಡ್ರೋನ್‌ಗಳ ಸರಣಿಯನ್ನು ಅಭಿವೃದ್ಧಿಪಡಿಸಿದೆ. ಇವು ದೂರದ ಗುರಿಗಳ ಮೇಲೆ ದಾಳಿ ಮಾಡಲು ತುಲನಾತ್ಮಕವಾಗಿ ಅಗ್ಗದ ಮಾರ್ಗವಾಗಿದೆ. ವರದಿಗಳ ಪ್ರಕಾರ, ಯುದ್ಧದಲ್ಲಿ ಇಸ್ರೇಲ್ ಮೇಲೆ 650 ಕ್ಷಿಪಣಿ ದಾಳಿ ನಡೆಸಿರುವ ಇರಾನ್, ಇತರೆ ಗುರಿಗಳ ಮೇಲೆ ನೂರಾರು ಕ್ಷಿಪಣಿ ದಾಳಿ ನಡೆಸಿದೆ. ಅಮೇರಿಕಾ, ಇಸ್ರೇಲ್ ದಾಳಿ ಬಳಿಕ ಇರಾನ್ ಶಸ್ತ್ರಾಸ್ತ್ರಗಳಲ್ಲಿ ಕುಸಿತ ಕಂಡುಬಂದಿದೆ. ಆದರೆ, ಇನ್ನೂ ಗಮನಾರ್ಹ ಪ್ರಮಾಣದ ದೀರ್ಘ ಶ್ರೇಣಿಯ ಅಸ್ತ್ರಗಳನ್ನು ಇರಾನ್ ಹೊಂದಿದೆ ಎನ್ನುತ್ತಾರೆ ವಿಶ್ಲೇಷಕರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK